ಸಂಪಾದಕರು
ಆನಂದಯ್ಯ ವಿರಕ್ತಮಠ
ಎಂ.ಎ ಪತ್ರಿಕೋಧ್ಯಮ
ಎಂ.ಎ ಇಂಗ್ಲೀಷ್ , ಬಿ.ಇಡಿ

Title code: KNKAN/26/A0482

# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES janashreetimes2026@gmail.com KANNADA DAILY MORNING

ಸಂಪುಟ : 01 ಸಂಚಿಕೆ : 08 ದಿನಾಂಕ: 12-06-2026 ಶುಕ್ರವಾರ ಪುಟ : 04 ದರ : 4 ರೂ. VOLUME 01 ISSUE: 08 FRIDAY 12-06-2026 PAGE: 04 PRICE : 4/-

## ಅಕ್ರಮ ಅಕ್ಕಿ ಸಾಗಾಟ 35 ಕ್ವಿಂಟಲ್ ಅಕ್ಕಿ ವಶ



ರೋಣ: ತಾಲೂಕಿನ ಮಲ್ಲಾಪುರ ಕಡೆಯಿಂದ ರೋಣ ಮಾರ್ಗವಾಗಿ ಸರಕು ವಾಹನದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಪಡಿತರಅಕ್ಕಿಯನ್ನು ಗುರುವಾರ ಆಹಾರ ಹಾಗೂ ಪೊಲೀಸ್ ಇಲಾಖೆಯವರು ದಾಳಿ ನಡೆಸಿ 35 ಕ್ವಿಂಟಲ್ ಅಕ್ಕಿ ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಆಹಾರ ನಿರೀಕ್ಷಕಿ ಸುವರ್ಣಾ ಜುಮ್ಮನಕಟ್ಟಿ ನೇತೃತ್ವದಲ್ಲಿ ಗುರುವಾರ ಪಟ್ಟಣದ ನೀರಾವರಿ ಪ್ರವಾಸಿ ಮಂದಿರದ ಹತ್ತಿರ ವಶಪಡಿಸಿಕೊಳ್ಳಲಾಗಿದೆ. 50 ಕೆಜಿಯ 69 ಪ್ಯಾಕೆಟ್‌ಗಳಲ್ಲಿ ಸಂಗ್ರಹಿಸಿದ 35 ಕ್ವಿಂಟಲ್ ಅಂಕಿಯ ಅಂದಾಜು ಮೌಲ್ಯ 77,400 ರೂ ಎಂದು ಅಂದಾಜಿಸಲಾಗಿದೆ, ಈ ಕುರಿತು ರೋಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸೊಳ್ಳೆಗಳ ಆಹಾರ ರಕ್ತ ಅಲ್ಲ ಹಣ್ಣು ಎಲೆ : ಎಫ್.ಸಿ ಹೊಸಮಠ

ಲಕ್ಷ್ಮೇಶ್ವರ: ಸಮೀಪದ ಶಿಗ್ಲಿ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಲೇರಿಯಾ ವಿರೋಧಿ ಮಾಸಾಚರಣೆ ಅಂಗವಾಗಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಬುಧವಾರ ಯಶಸ್ವಿಯಾಗಿ ನೆರವೇರಿತು.




ಹಿರಿಯ ಆರೋಗ್ಯ ನಿರೀಕ್ಷಕ ಎಫ್.ಸಿ.ಹೊಸಮಠ ಮಾತನಾಡಿ ,ಇದು ಹೆಣ್ಣು ಅನಾಫಿಲಿಸ್ ಸೊಳ್ಳೆಯು ಕಚ್ಚುವುದರಿಂದ ಹರಡುವ ಕೀಟಜನ್ಯ ರೋಗವಾಗಿದೆ, ಸೊಳ್ಳೆಗಳ ಆಹಾರ ರಕ್ತ ಅಲ್ಲ. ಹಣ್ಣು ಮತ್ತು ಎಲೆಗಳ ರಸವನ್ನು ತಿಂದು ಜೀವಿಸುವ ಸೊಳ್ಳೆಗಳು ಸಂತಾನೋತ್ಪತ್ತಿಗಾಗಿ ಮಾತ್ರ ರಕ್ತವನ್ನು ಹೀರುತ್ತವೆ. ಒಮ್ಮೆಗೆ 300 ಮೊಟ್ಟೆಗಳನ್ನು ಇಡುವ ಸೊಳ್ಳೆಗಳ ಆಯಸ್ಸು 30 ದಿನಗಳು ಮಾತ್ರ. ಈ ಅವಧಿಯಲ್ಲಿ 6 ಬಾರಿ ಮೊಟ್ಟೆಗಳನ್ನು ಇಡುವ ಮೂಲಕ ತಮ್ಮ ಜೀವಿತಾವಧಿಯಲ್ಲಿ 1800 ಮರಿಗಳನ್ನು ಒಂದು ಸೊಳ್ಳೆ ಮಾಡುತ್ತದೆ. ಇವುಗಳನ್ನು ಮರಿಗಳ ಹಂತದಲ್ಲೇ ನಾಶ ಮಾಡುವುದರಿಂದ ಸೊಳ್ಳೆಗಳ ನಿಯಂತ್ರಣ ಸಾಧ್ಯವಾಗಲಿದೆ ಎಂದರು. ಚರಂಡಿಗಳಲ್ಲಿ ಹಾಗೂ ಮನೆಯ ಸುತ್ತ ಎಲ್ಲೆಂದರಲ್ಲಿ ನೀರು ನಿಲ್ಲುವುದನ್ನು ತಪ್ಪಿಸುವ ಮೂಲಕ ಅವುಗಳಿಗೆ ವಾಸಸ್ಥಾನಗಳಿಲ್ಲದಂತೆ ಮಾಡಬೇಕು, ಸಂಗ್ರಹ ನೀರು ಹಾಗೂ ನೀರಿನ ಕೊಳಚೆ ಪ್ರದೇಶದಲ್ಲಿ ಸ್ವಚ್ಛತೆ ಕಾಪಾಡುವ ಮೂಲಕ ಮಲೇರಿಯಾ ರೋಗವನ್ನು ತಡೆಯಬಹುದು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ.ಕೆ.ಹತ್ತಿಕಾಳ ವಹಿಸಿದ್ದರು. ಮುಖ್ಯಅತಿಥಿಗಳಾಗಿ ಆರ್.ಡಿ.ಕಲಾಯಗಾರ, ಬಿ.ಜಿ.ಬಣಗಾರ, ಎಸ್.ಬಿ.ಅಣ್ಣಿಗೇರಿ, ಎಲ್. ತಿಪ್ಪನಾಯ್ಕ್, ಸುಧಾ ಪಪ್ತಿ, ಆರೋಗ್ಯ ಇಲಾಖೆಯ ರವಿ ಪುಥಳೀಕರ ಮುಂತಾದವರಿದ್ದರು.ದೀಪಾ ಭಸ್ಮೇ ಕಾರ್ಯಕ್ರಮ ನಿರ್ವಹಿಸಿದರು.

## ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಗದಗ: 2026-27 ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ, ಮಲ್ಲಸಮುದ್ರ ಇಲ್ಲಿ ಸಮಾಜ ವಿಜ್ಞಾನ ವಿಷಯಗಳನ್ನು ಭೋಧಿಸಲು ಅರ್ಹ ಅತಿಥಿ ಉಪನ್ಯಾಸಕರ ಅರ್ಹ ಅಭ್ಯರ್ಥಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ,ಅರ್ಜಿ ಸಲ್ಲಿಸಲು ಜೂನ್ 16 ಕೊನೆಯ ದಿನವಾಗಿದೆ.

ಅರ್ಹ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ದಾಖಲಾತಿಗಳನ್ನು ಪ್ರಾಂಶುಪಾಲರು, ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ, ಮಲ್ಲಸಮುದ್ರದ ಭೇಟಿ ನೀಡಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮಲ್ಲಸಮುದ್ರ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗೆ ಸಂಪರ್ಕಿಸಬುಹುದು ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 4 ಜಿಲ್ಲೆ ಖದೀಮರಿಗೆ ಹೆಡೆಮುರಿ ಕಟ್ಟಿದ ಗದಗ ಪೊಲೀಸರು

## 20 ದಿನ, 13 ಪ್ರಕರಣ, 15ಲಕ್ಷ ಚಿನ್ನಾಭರಣ ವಶ। ಮೆಚ್ಚುಗೆ ವ್ಯಕ್ತಪಡಿಸಿದ ಸಾರ್ವಜನಿಕರು

ಗದಗ: ಜಿಲ್ಲೆ ಸೇರಿದಂತೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಸರಣಿ ಮನೆಗಳ್ಳತನ ನಡೆಸಿ ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸಿದ್ದ ಅಂತರ್ ಜಿಲ್ಲಾ ಖದೀಮರ ಗ್ಯಾಂಗ್ ಅನ್ನು ಬಂಧಿಸುವಲ್ಲಿ ಗದಗ ಜಿಲ್ಲಾ ಪೊಲೀಸರು ಮಹತ್ವದ ಯಶಸ್ಸು ಸಾಧಿಸಿದ್ದಾರೆ. ಆರೋಪಿತ-ರಿಂದ ಸುಮಾರು 145 ಗ್ರಾಂ ತೂಕದ ಬಂಗಾರದ ಆಭರಣಗಳು, 332 ಗ್ರಾಂ ತೂಕದ ಬೆಳ್ಳಿ ಆಭರಣಗಳು ಹಾಗೂ 50ಸಾವಿರ ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ.

ಕಳೆದ ಮೇ ತಿಂಗಳಲ್ಲಿ ಗದಗ ಜಿಲ್ಲೆಯ ಮುಂಡರಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಾಲ್ಕು, ನರೇಗಲ್ಲ ಠಾಣಾ ವ್ಯಾಪ್ತಿಯಲ್ಲಿ ಎರಡು, ರೋಣ ಠಾಣಾ ವ್ಯಾಪ್ತಿಯಲ್ಲಿ ಒಂದು ಹಾಗೂ ಶಿರಹಟ್ಟಿ ಠಾಣಾ ವ್ಯಾಪ್ತಿಯಲ್ಲಿ ಒಂದು ಸೇರಿ ಒಟ್ಟು ಎಂಟು ಮನೆಗಳ್ಳತನ ಪ್ರಕರಣಗಳು ವರದಿಯಾಗಿದ್ದವು. ಕೇವಲ 20 ದಿನಗಳ ಅಂತರದಲ್ಲಿ ನಡೆದ ಈ ಸರಣಿ ಕಳ್ಳತನಗಳಿಂದ ಗ್ರಾಮೀಣ ಭಾಗದ ಜನರು ಆತಂಕಕ್ಕೆ ಒಳಗಾಗಿದ್ದರು. ಪ್ರಕರಣಗಳ ಗಂಭೀರತೆಯನ್ನು ಅರಿತ ಜಿಲ್ಲಾ ಪೊಲೀಸ್ ಅಧೀಕ್ಷಕ ರೋಹನ್ ಜಗದೀಶ ಅವರ ನಿರ್ದೇಶನದಂತೆ ಜಿಲ್ಲೆಯಾದ್ಯಂತ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ, ವಾಹನಗಳ ತಪಾಸಣೆ ನಡೆಸಲಾಯಿತು. ಅಲ್ಲದೇ ನಾಲ್ಕು ವಿಶೇಷ






ತಂಡಗಳನ್ನು ರಚಿಸಿ, ಸಿಸಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ, ಮೊಬೈಲ್ ಸಿಡಿಆರ್ ವಿಶ್ಲೇಷಣೆ, ಟವರ್ ಡಂಪ್ ಮಾಹಿತಿ ಸಂಗ್ರಹ ಹಾಗೂ ಸಂಶಯಾಸ್ಪದ ವ್ಯಕ್ತಿಗಳ ಮೇಲೆ ನಿಗಾ ವಹಿಸುವ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲಾಯಿತು.

ತನಿಖೆಯ ವೇಳೆ ದೊರೆತ ಸುಳಿವಿನ ಮೇರೆಗೆ ಜೂನ್.7 ರಂದು ಮುಂಡರಗಿ ಪಟ್ಟಣದ ಬ್ಯಾಲವಾಡಗಿ ಕ್ರಾಸ್ ಬಳಿ ಮೂವರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ಆರೋಪಿಗಳು ಗದಗ ಜಿಲ್ಲೆಯ ಎಂಟು ಮನೆಗಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದನ್ನು ಒಪ್ಪಿಕೊಂಡಿದ್ದಾರೆ. ಇದಲ್ಲದೆ ಧಾರವಾಡ ಜಿಲ್ಲೆಯ ಅಣ್ಣಿಗೇರಿ ಹಾಗೂ ದಾಟನಾಳ, ದಾವಣಗೆರೆ ಜಿಲ್ಲೆಯ ಹದಡಿ, ಮೈಸೂರು ಜಿಲ್ಲೆಯ ಹುಣಸೂರು ಹಾಗೂ ಕೊಪ್ಪಳ ಜಿಲ್ಲೆಯ ಬೇಳಗಟ್ಟಿಯಲ್ಲಿಯೂ ಕಳ್ಳತನ ನಡೆಸಿರುವುದಾಗಿ ಒಪ್ಪಿಕೊಂಡಿದ್ದು, ಒಟ್ಟು 13 ಪ್ರಕರಣಗಳಲ್ಲಿ ಇವರ ಕೈವಾಡ ಬೆಳಕಿಗೆ ಬಂದಿದೆ.ಕಳ್ಳತನಕ್ಕೆ ರೂಪಿಸಿಕೊಂಡಿದ್ದರು ವಿಶೇಷ ತಂತ್ರ ಆರೋಪಿಗಳು ಹಾವೇರಿ ಜಿಲ್ಲೆಯ ಅಕ್ಕಿಆಲೂರಿನಲ್ಲಿ ಮೋಟಾರ್ ಬೈಕ್ ಕಳವು ಮಾಡಿಕೊಂಡು ಅದರಲ್ಲಿ ಸಂಚರಿಸುತ್ತಿದ್ದರು. ಮುಖಕ್ಕೆ ಮಾಸ್ಕ್, ಕೈಗೆ ಗ್ಲೌಸ್ ಧರಿಸಿ, ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡು ಗ್ರಾಮೀಣ ಪ್ರದೇಶಗಳ ರಸ್ತೆಯ ಪಕ್ಕದಲ್ಲಿರುವ ಬೀಗ ಹಾಕಿದ ಮನೆಗಳನ್ನು ಗುರಿಯಾಗಿಸಿಕೊಂಡು ಕಳ್ಳತನ ನಡೆಸುತ್ತಿದ್ದರು.

ಕೆಲವು ಕಡೆಗಳಲ್ಲಿ ಲಾರಿಗಳಲ್ಲಿ ಪ್ರಯಾಣಿಸಿ ದೂರದ ಗ್ರಾಮಗಳಿಗೆ ತೆರಳಿ ಕೃತ್ಯ ಎಸಗುತ್ತಿದ್ದರು. ಅಪರಾಧಕ್ಕೆ ಮುನ್ನ ಸವಣೂರು, ಗುತ್ತಲ ಹಾಗೂ ಹಾವೇರಿ ಹೊರವಲಯಗಳಲ್ಲಿ ಸೇರಿ ಸಂಚು ರೂಪಿಸುತ್ತಿದ್ದ ಆರೋಪಿಗಳು, ಕಳ್ಳತನದ ಬಳಿಕ ಜನ ಸಂಚಾರ ಕಡಿಮೆ ಇರುವ ಪ್ರದೇಶಗಳಲ್ಲಿ ಹಗಲು ವೇಳೆ ವಿಶ್ರಾಂತಿ ಪಡೆಯುತ್ತಿದ್ದರು ಎಂದು ತನಿಖೆಯಲ್ಲಿ ತಿಳಿದುಬಂದಿದೆ.

4ನೇ ಪುಟಕ್ಕೆ....

## ಸ್ಕೈರಾಫ್ಟ್ ಏರೋಸಲ್ಯೂಷನ್ಸ್'ನಿಂದ ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಓರಿಯಂಟೆಷನ್

ಗದಗ: ತಾಲ್ಲೂಕಿನ ಹುಲಕೋಟಿ ಆರ್.ಟಿ. ಇ ಸೋಸೈಟಿಯಲ್ಲಿ ಸ್ಕೈರಾಫ್ಟ್ ಏರೋ ಸಲ್ಯೂಷನ್ಸ್ ಇವರಿಂದ ಇಂಜನಿಯ-ರಿಂಗ್ ವಿದ್ಯಾರ್ಥಿಗಳಿಗೆ ಆಕರ್ಷಕ ಓರಿಯಂಟೇಷನ್ ಕಾರ್ಯಕ್ರಮ ನಡೆಯಿತು.

ಡ್ರೋನ್ ತಂತ್ರಜ್ಞಾನ ಮತ್ತು ಅದರ ಕೈಗಾರಿಕಾ ಅನ್ವಯಿಕೆಗಳ ಕುರಿತು ಜಾಗೃತಿ ಮೂಡಿಸುವುದು, ಡ್ರೋನ್ ಪರಿಸರ ವ್ಯವಸ್ಥೆಯಲ್ಲಿ ವೃತ್ತಿ ಅವಕಾಶಗಳ ತಿಳುವಳಿಕೆ ನೀಡುವುದು, ಡ್ರೋನ್ ಅಭಿವೃದ್ಧಿಗೆ ಅಗತ್ಯವಿರುವ ಅಂತರಶಿಸ್ತೀಯ ಕೊಡುಗೆಗಳಿಗೆ ಒಡ್ಡಿಕೊಳ್ಳುವುದು, ಲೈವ್ ಡ್ರೋನ್ ಹಾರಾಟ ಪ್ರದರ್ಶನಗಳ ಮೂಲಕ ಪ್ರಾಯೋಗಿಕ ಅನುಭವ ಹಂಚಿಕೊಳ್ಳುವುದರ ಮೂಲಕ ಹೊಸ ತಂತ್ರಜ್ಞಾನಗಳು ಮತ್ತು ನಾವೀನ್ಯತೆಗಳಲ್ಲಿ ವಿದ್ಯಾರ್ಥಿಗಳ ಆಸಕ್ತಿಯನ್ನು ಹೆಚ್ಚಿಸಲಾಯಿತು.

ಗದಗದ ಸ್ಕೈರಾಫ್ಟ್ ಏರೋಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ವಿಶೇಷವಾಗಿ ಕ್ಯಾಪ್ಟನ್ ಗಿರೀಶ್ ಓದುಗೌಡರ್ ಮತ್ತು ಶ್ರೀಮತಿ ಚಂದ್ರಿಕಾ ಅವರು ಮಾಹಿತಿಯುಕ್ತ ಮತ್ತು ಆಕರ್ಷಕವಾದ ಓರಿಯಂಟೇಶನ್ ಕಾರ್ಯಕ್ರಮವನ್ನು ನಡೆಸಿದರು. ಸಂಸ್ಥೆಯ








ಕಾರ್ಯದರ್ಶಿ ಸಚಿನ್ ಡಿ. ಪಾಟೀಲ ಮಾತನಾಡಿ ಸ್ಕೈರಾಫ್ಟ್ ಸಂಸ್ಥೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಈ ಸಂಸ್ಥೆಯ ಸದುಪಯೋಗವನ್ನು ನಮ್ಮ ವಿದ್ಯಾರ್ಥಿಗಳು ಪಡೆದುಕೊಂಡು, ಬರುವ ದಿನಮಾನಗಳಲ್ಲಿ ಹುಲಕೋಟಿಯಿಂದ ವಿಶ್ವಮಟ್ಟದಲ್ಲಿ ಹೆಸರುವಾಸಿಯಾಗಬೇಕೆಂದರು. ಇನ್ನೂ ಸ್ಕೈರಾಫ್ಟ್ ಸಂಸ್ಥೆಯ ಕಾರ್ಯವೈಖರಿಗೆ ಆಡಳಿತ ಮಂಡಳಿ, ಪ್ರಾಂಶುಪಾಲರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

## ಲೋಕ ಕಲ್ಯಾಣಾರ್ಥವಾಗಿ ಶಾಂತಲಿಂಗ ಶ್ರೀ ಮೌನಾನುಷ್ಟಾನ ಶ್ರೀಗಳ ದರ್ಶನಕ್ಕಾಗಿ ಬರುತ್ತಿರೋ ಭಕ್ತರು



ನರಗುಂದ: ಲೋಕ ಕಲ್ಯಾಣಾರ್ಥ ಕಲ್ಲೂರಿನ ಶ್ರೀಸಿದ್ಧೇಶ್ವರ ದೇವಸ್ಥಾನದಲ್ಲಿ ಮೌನಾನುಷ್ಟಾನ ಕೈಗೊಂಡಿರುವ ನರಗುಂದ ತಾಲೂಕಿನ ಭೈರನಹಟ್ಟಿ ಶ್ರೀಶಾಂತಲಿಂಗ ಸ್ವಾಮಿಗಳನ್ನು ಪಟ್ಟಣದ ವಿವಿಧ ಮಹಿಳಾ ಸಂಘಟನೆಗಳ ಸದಸ್ಯರು ಬುಧವಾರ ಸತ್ಕರಿಸಿ ಆಶೀರ್ವಾದ ಪಡೆದರು.

ಮಾಲಾ ಪಾಟೀಲ, ರಾಚನಗೌಡ ಪಾಟೀಲ, ಮಂಗಳಾ ಪಾಟೀಲ, ರಾಜೇಶ್ವರಿ ಪಾಟೀಲ, ಭಾರತಿ ಹೊಂಗಲ, ಗಂಗಮ್ಮ ಪಾಟೀಲ, ಶಾಂತಾ ಶಿರಸಂಗಿ, ಶೋಭಾ ಚೌಕಿಮಠ, ಸುಮಿತ್ರಾ ಭಾಸಲಾಪೂರ, ಅಕ್ಕಮ್ಮ ಸುಂಕದ, ರತ್ನಾ ಅಂಬಲಿ, ಮಲ್ಲಮ್ಮ ಪಾಟೀಲ ಉಪಸ್ಥಿತರಿದ್ದರು.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಮೋದಿ ನೆಹರು ದಾಖಲೆ ಮುರಿದಿದ್ದಾರೆ ಡಾ. ಚಂದ್ರು ಲಮಾಣಿ



ಲಕ್ಷ್ಮೇಶ್ವರ: ಇಲ್ಲಿನ ಸೋಮೇಶ್ವರ ದೇವಸ್ಥಾನದಲ್ಲಿ ಪ್ರಧಾನಿಯಾಗಿ ದೀರ್ಘಾವಧಿ ಸೇವೆ ಸಲ್ಲಿಸುವ ಮೂಲಕ ನೆಹರು ಅವರ ದಾಖಲೆಯನ್ನು ಪ್ರಧಾನಿ ನರೇಂದ್ರ ಮೋದಿಯವರು ಮುರಿದಿದ್ದಾರೆ ಎಂದು ಶಾಸಕ ಡಾ ಚಂದ್ರು ಲಮಾಣಿ ಹೇಳಿದರು.

ಅವರು ಪಟ್ಟಣದ ಐತಿಹಾಸಿಕ ಸೋಮೇಶ್ವರ ದೇವಸ್ಥಾನದಲ್ಲಿ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿಯವರ 12ವರ್ಷ ಪ್ರಧಾನಿಯಾಗಿ ಸೇವೆಸಲ್ಲಿಸಿ ದಾಖಲೆ ಬರೆದಿದ್ದು, ಇದರ ಪ್ರಯುಕ್ತ ಶಿರಹಟ್ಟಿ ಬಿಜೆಪಿ ಮಂಡಲ ಹಾಗೂ ನಗರ ಘಟಕದಿಂದ ಪೂಜೆ ಸಲ್ಲಿಸಿ ಸಿಹಿ ಹಂಚುವ ಮೂಲಕ ಕಾರ್ಯಕರ್ತರ ಉದ್ದೇಶಿಸಿ ಮಾತನಾಡುತ್ತ. ದೇಶ ಅಭಿವೃದ್ಧಿ ಪಥದಲ್ಲಿ ಹೋಗುತ್ತಿದೆ ಸತತ ಮೂರು ಬಾರಿ ಜಯಭೇರಿ ಬಾರಿಸಿದ ಅವರು, ನಂತರ ಕೇಂದ್ರದಲ್ಲಿದ್ದ ಯುಪಿಎ ಸರ್ಕಾರದ ವಿರುದ್ಧ ದೇಶಾದ್ಯಂತ ಬಿಜೆಪಿ ಅಲೆ ಸೃಷ್ಟಿಸಿದರು. ಬಿಜೆಪಿ ಇತಿಹಾಸದಲ್ಲೇ ಮೊದಲ ಬಾರಿಗೆ ಸ್ಪಷ್ಟ ಬಹುಮತದೊಂದಿಗೆ ಕೇಂದ್ರದಲ್ಲಿ ಅಧಿಕಾರ ಹಿಡಿಯುವಂತೆ ಮಾಡಿದ್ದಲ್ಲದೆ, ಕಾಂಗ್ರೆಸ್ ಪಕ್ಷವನ್ನು ಕುಸಿಯುವಂತೆ ಮಾಡಿದರು. ಹಿಂದುತ್ವ, ಸಾಂಸ್ಕೃತಿಕ ರಾಷ್ಟ್ರೀಯತೆ ಮತ್ತು ಅಭಿವೃದ್ಧಿಯ ಮಂತ್ರದೊಂದಿಗೆ ನಡೆದಿದ್ದಾರೆ ಅವರ ಈ ಸಾಧನೆ ಬಿಜೆಪಿ ಕಾರ್ಯಕರ್ತರಿಗೆ ಹರ್ಷ ತಂದಿದ್ದು ಈ ಯಶಸ್ಸಿಗೆ ಬಿಜೆಪಿ ಕಾರ್ಯಕರ್ತರ ಶ್ರಮವು ಇದೆ ಎಂದು ಹೇಳಿದರು.

ಇದೆ ವೇಳೆ ಭಾರತೀಯ ಸೇನೆಯು ಅಗ್ನಿಪಥ ಯೋಜನೆಯಡಿಯಲ್ಲಿ ಅಗ್ನಿವೀರಗೆ ನೇಮಕಾತಿ ಆಗಿದ್ದ ಪಟ್ಟಣದ ಪ್ರಕಾಶ ಕುಂಬಾರ ವಿದ್ಯಾರ್ಥಿಯನ್ನ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಚಂಬಣ್ಣ ಬಾಳಿಕಾಯಿ ಶಿರಹಟ್ಟಿ ಮಂಡಲ ಪ್ರಕಾರ್ಯದರ್ಶಿ ಗಂಗಾಧರ ಮೆಣಸಿನಕಾಯಿ, ನಗರ ಪ್ರಕಾರ್ಯದರ್ಶಿ ಪ್ರವೀಣ ಬೋಮಲೆ ಬಸವರಾಜ ಚಕ್ರಸಾಲಿ ನಿಂಗಪ್ಪ ಬನ್ನಿ ನೀಲಪ್ಪ ಹತ್ತಿ, ದುಂಡೇಶ ಕೋಟಗಿ,ಅನಿಲ ಮುಳಗುಂದ ಶಕ್ತಿ ಕತ್ತಿ, ವೀರಣ್ಣ ಅಕ್ಕೂರ,ಈ-ರಣ್ಣ ಪೂಜಾರ ಸಂತೋಷ ಜಾವೂರ ಮಂಜುನಾಥ ಗಜಾಕೋಶ, ರಾಮು ನಾಯಕ,ಗಿ-ರೀಶ ಚೌರಡ್ಡಿ, ಅಭಿಷೇಕ ಉಮಚಗಿ,ರಾಜಶೇಖರ ಶಿಗ್ಲಿಮಠ, ಬಸವರಾಜ ಮಜ್ಜಿಗುಡ್ಡ,ರಾಜಶೇಖರ ಶಿರಹಟ್ಟಿ,ಚಂದ್ರು ಲಮಾಣಿ, ಪ್ರವೀಣ ಮುದಗಲ್,ಮಂಜುನಾಥ ಬಸಾಪುರ,ಬಿಜೆಪಿ ಕಾರ್ಯಕರ್ತರು ಇದ್ದರು.

## ಮಧ್ಯರಾತ್ರಿ ಗ್ರಾಮಕ್ಕೆ ನುಗ್ಗಿ ಮನೆಯ ಕಾಂಪೌಂಡ್ ಧ್ವಂಸಗೊಳಿಸಿದ ಒಂಟಿ ಆನೆ



ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆಯ ಗುಲ್ಲಹಟ್ಟಿ ಕಾವಲು ಗ್ರಾಮದ ಸಾಮಾಜಿಕ ಕಾರ್ಯಕರ್ತ ಹಾಗೂ ಸಾಹಿತಿ ಡಾ. ಸತ್ಯಮೂರ್ತಿ, ಗೂಗಿ ಅವರ ಮನೆಯ ಮೇಲೆ ಒಂಟಿ ಆನೆ ರಾತ್ರಿ ಏಕಾಏಕಿ ದಾಳಿ ನಡೆಸಿದೆ.

ರಾತ್ರಿ 12 ಗಂಟೆಗೆ ಏಕಾಏಕಿ ದಾಳಿ ಮಾಡಿದ ಆನೆ ಕಾಂಪೌಂಡನ್ನು ಮುರಿದು ಹಾಕಿ, ಕೇಬಲ್ ವೈರನ್ನ ಕಿತ್ತುಹಾಕಿ, ಪಕ್ಕದ ಮನೆಯವರ ಜಾಗದಲ್ಲಿ ಇದ್ದ ಬಾಳೆಗೊನೆ, ಹಾಗೂ ಹಲಸಿನ ಹಣ್ಣನ್ನು ತಿಂದು ರಾತ್ರಿ 1ರಿಂದ 5 ಗಂಟೆಯವರೆಗೆ ಜಾಗವನ್ನು ಬಿಟ್ಟು ಕದಲದೆ ಒಂಟಿ ಆನೆ ಮನೆಯ ಮುಂದೆಯೇ ಬೀಡು ಬಿಟ್ಟಿರುವುದನ್ನು ಗಮನಿಸಿದ ಸಾರ್ವಜನಿಕರು ಶಬ್ದ ಮಾಡಿ ಎಷ್ಟೇ ಪಟಾಕಿ ಹೊಡೆದರೂ ಅಲ್ಲಿಂದ ಕದಲದೇ ನಾಲ್ಕೈದು ಗಂಟೆಗಳ ಕಾಲ ಜನರಲ್ಲಿ ಆತಂಕ ಮತ್ತು ಭಯ ಭೀತಿಯನ್ನು ಸೃಷ್ಟಿಸಿತ್ತು.

**ಅರಣ್ಯ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯ :**

ಅರಣ್ಯ ಇಲಾಖೆ ಅಧಿಕಾರಿಗಳ ಸಹಾಯ ಕೋರಿ ಸತತ ನಾಲ್ಕು ಗಂಟೆಗಳ ಕಾಲ ಫೋನ್ ಮಾಡಿದರೂ ಒಬ್ಬರೂ ಕೂಡ ಫೋನ್ ಕರೆಗೆ ಉತ್ತರಿಸದೆ ನಿರ್ಲಕ್ಷ್ಯ ಮೆರೆದಿದ್ದಾರೆ. ನಮ ಪ್ರಾಣಕ್ಕೆ ತೊಂದರೆಯಾದರೆ ಯಾರನ್ನು ಪ್ರಶ್ನಿಸುವುದು ಎಂಬುದು ಸಾರ್ವಜನಿಕರ ಯಕ್ಷಪ್ರಶ್ನೆಯಾಗಿದೆ.

## ಕಾಂಗ್ರೆಸ್ ಜೊತೆ ಟಿಎಂಸಿ ವಿಲೀನವಿಲ್ಲ



ನವದೆಹಲಿ: ತೃಣಮೂಲ ಕಾಂಗ್ರೆಸ್ ಪಕ್ಷ ಕಾಂಗ್ರೆಸ್ ಪಕ್ಷದ ಜೊತೆ ವಿಲೀನವಾಗಲಿದೆ ಎಂಬ ಮಾತುಗಳಿಗೆ ಯಾವುದೇ ಆಧಾರವಿಲ್ಲ ಎಂದು ಟಿಎಂಸಿ ನಾಯಕರು ಸ್ಪಷ್ಟಪಡಿಸಿದ್ದಾರೆ.

ಎರಡೂ ಪಕ್ಷಗಳ ನಾಯಕರ ನಡುವೆ ಇತ್ತೀಚೆಗೆ ರಾಜಕೀಯ ಚರ್ಚೆಗಳು ನಡೆದಿದ್ದರೂ ಸಹ, ವಿಲೀನದ ಯಾವುದೇ ಪ್ರಸ್ತಾಪವನ್ನು ಉಭಯ ಪಕ್ಷಗಳು ಪರಿಗಣಿಸುತ್ತಿಲ್ಲ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಮಮತಾ ಬ್ಯಾನರ್ಜಿ ಮತ್ತು ಅಭಿಷೇಕ್ ಬ್ಯಾನರ್ಜಿ ಅವರಿಗೆ ಕಾಂಗ್ರೆಸ್‌ನಲ್ಲಿ ಉನ್ನತ ಹುದ್ದೆಗಳನ್ನು ನೀಡಲಾಗುತ್ತಿದೆ ಮತ್ತು ಪಕ್ಷಗಳನ್ನು ವಿಲೀನಗೊಳಿಸಲಾಗುತ್ತಿದೆ ಎಂಬ ಸುದ್ದಿಗಳು ಕೇವಲ ಊಹಾಪೋಹಗಳಾಗಿದ್ದು, ಇವುಗಳಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂದು ಸ್ಪಷ್ಟನೆ ನೀಡಲಾಗಿದೆ.

ಇದರ ನಡುವೆಯೂ ಕಾಂಗ್ರೆಸ್ ಮತ್ತು ಟಿಎಂಸಿ ಎರಡೂ ಪಕ್ಷಗಳು ಒಟ್ಟಾಗಿ ಕೆಲಸ ಮಾಡಲು ಸಿದ್ಧವಾಗಿವೆ. ಸಾಮಾನ್ಯ ರಾಜಕೀಯ ಹಿತಾಸಕ್ತಿಯ ವಿಷಯಗಳ ಕುರಿತು ಚರ್ಚೆಗಳನ್ನು ಮುಂದುವರಿಸಿವೆ ಎಂದು ಮೂಲಗಳು ಹೇಳಿವೆ. ವರದಿಯ ಪ್ರಕಾರ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಇತ್ತೀಚೆಗೆ ತಮ್ಮ ಪಕ್ಷಗಳ ನಡುವೆ ಸಮನ್ವಯತೆಯನ್ನು ಸುಧಾರಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದ್ದಾರೆ. ಟಿಎಂಸಿ ಪಕ್ಷವು ದೊಡ್ಡ ಮಟ್ಟದ ಆಂತರಿಕ ಸವಾಲನ್ನು ಎದುರಿಸುತ್ತಿರುವ ಸಮಯದಲ್ಲಿಯೇ ಈ ಮಾತುಕತೆ ನಡೆದಿರುವುದು ತೀವ್ರ ಗಮನ ಸೆಳೆದಿದ್ದು, ಪಕ್ಷದ ಮುಂದಿನ ರಾಜಕೀಯ ಕಾರ್ಯತಂತ್ರದ ಬಗ್ಗೆ ಹಲವು ಊಹಾಪೋಹಗಳಿಗೆ ಕಾರಣವಾಗಿದೆ. ಹಿರಿಯ ಕಾಂಗ್ರೆಸ್ ನಾಯಕರು ನವದೆಹಲಿಯಲ್ಲಿ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರನ್ನು ಭೇಟಿಯಾದ ನಂತರ ಕಾಂಗ್ರೆಸ್–ಟಿಎಂಸಿ ವಿಲೀನದ ವದಂತಿಗಳು ಮತ್ತಷ್ಟು ತೀವ್ರಗೊಂಡಿವೆ.

## ಎಥೆನಾಲ್ ಮಿಶ್ರಿತ ಪೆಟ್ರೋಲ್‌ಗೆ ಅಬಕಾರಿ ಸುಂಕ ಮನ್ನಾ




ನವದೆಹಲಿ: ಎಥೆನಾಲ್ ಮಿಶ್ರಿತ ಪೆಟ್ರೋಲ್‌ನ ವಿವಿಧ ಮಾದರಿಗಳ ಮೇಲಿನ ಅಬಕಾರಿ ಸುಂಕವನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ಮನ್ನಾ ಮಾಡಿದೆ.ಹಣಕಾಸು ಸಚಿವಾಲಯ ಇಂದು ಬೆಳಿಗ್ಗೆ ಹೊರಡಿಸಿದ ಅಧಿಸೂಚನೆಯಲ್ಲಿ ಈ ಮಾಹಿತಿ ತಿಳಿಸಲಾಗಿದೆ.

ಅಧಿಸೂಚನೆಯ ಪ್ರಕಾರ, ಕ್ರಮವಾಗಿ ಶೇ.22, ಶೇ.25, ಶೇ.27 ಮತ್ತು ಶೇ.30 ಎಥೆನಾಲ್ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಶೂನ್ಯ (ನಿಲ್)ಎಂದು ಘೋಷಿಸಲಾಗಿದೆ. ಗ್ರಾಹಕರು ಹೆಚ್ಚು ಪ್ರಮಾಣದಲ್ಲಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಕೆಗೆ ಮುಂದಾಗುವಂತೆ ಉತ್ತೇಜಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಮೇ ತಿಂಗಳ ದ್ವಿತೀಯಾರ್ಧದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಪ್ರತಿ ಲೀಟರ್‌ಗೆ ಸುಮಾರು 7.50ರಷ್ಟು ಏರಿಕೆಯಾಗಿದ್ದ ಹಿನ್ನೆಲೆಯಲ್ಲಿ ಈ ಕ್ರಮ ಮಹತ್ವ ಪಡೆದಿದೆ. ಇದಕ್ಕೂ ಮೊದಲು, ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮ ಜಾಗತಿಕ ಕಚ್ಚಾತೈಲ ಬೆಲೆ ಏರಿಕೆಯಿಂದ ದೇಶೀಯ ಗ್ರಾಹಕರಿಗೆ ಆಗುವ ಹೊರೆ ತಗ್ಗಿಸಲು ಕೇಂದ್ರ ಸರ್ಕಾರ ಮಾರ್ಚ್ ತಿಂಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 10ರೂಕಡಿತಗೊಳಿಸಿತ್ತು. ಇದರಿಂದ ಸರ್ಕಾರವು ವಾರ್ಷಿಕವಾಗಿ 1 ಲಕ್ಷ ಕೋಟಿಗೂ ಅಧಿಕ ಆದಾಯವನ್ನು ತಗ್ಗಿದೆ. ಎಥೆನಾಲ್ ಮಿಶ್ರಿತ ಇಂಧನ ಬಳಕೆಯನ್ನು ಉತ್ತೇಜಿಸುವ ಮೂಲಕ ಕಚ್ಚಾತೈಲ ಆಮದು ಅವಲಂಬನೆಯನ್ನು ಕಡಿಮೆ ಮಾಡುವುದು, ಪರಿಸರ ಮಾಲಿನ್ಯ ತಗ್ಗಿಸುವುದು ಹಾಗೂ ರೈತರಿಗೆ ಹೆಚ್ಚುವರಿ ಆದಾಯದ ಅವಕಾಶ ಕಲ್ಪಿಸುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ.

# ಅನರ್ಹರನ್ನು ಕೈಬಿಡಲು ಗ್ಯಾರಂಟಿ ಯೋಜನೆಗಳ ಸಮಗ್ರ ಪರಿಷ್ಕರಣೆಗೆ ಮುಂದಾದ ಸರ್ಕಾರ

ಬೆಂಗಳೂರು: ರಾಜ್ಯ ಸರ್ಕಾರವು ತನ್ನ ಮಹತ್ವಾಕಾಂಕ್ಷೆಯ ಐದು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಅರ್ಹ ಫಲಾನುಭವಿಗಳಿಗೆ ಮಾತ್ರ ಸೌಲಭ್ಯ ಸಿಗುವಂತೆ ಮಾಡಲು, ಫಲಾನುಭವಿಗಳ ಪಟ್ಟಿಯನ್ನು ಸಮಗ್ರವಾಗಿ ಪರಿಷ್ಕರಿಸಲು ಸರ್ಕಾರ ನಿರ್ಧರಿಸಿದೆ.

ಈ ಸಂಬಂಧ ಅಧಿಕಾರಿಗಳಿಗೆ ತಳಮಟ್ಟದವರೆಗೆ ಪರಿಶೀಲನೆ ನಡೆಸಲು ಮತ್ತು 15 ದಿನಗಳ ಒಳಗಾಗಿ ವಿಸ್ತೃತ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸೂಚಿಸಿದೆ. ಅಗತ್ಯವಿದ್ದಲ್ಲಿ ಫಲಾನುಭವಿಗಳು ತಮ ದಾಖಲೆಗಳನ್ನು ಮತ್ತೆ ಸಲ್ಲಿಸಬೇಕಾದ ಪರಿಸ್ಥಿತಿ ಎದುರಾಗಬಹುದು ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಅನರ್ಹರು ಯೋಜನೆಯ ಲಾಭ ಪಡೆಯುತ್ತಿರುವುದನ್ನು ತಡೆಯಲು ಮತ್ತು ಸರ್ಕಾರಿ ಬೊಕ್ಕಸದ ಮೇಲಿನ ಅನಗತ್ಯ ಹೊರೆ ಕಡಿಮೆ ಮಾಡಲು ಫಲಾನುಭವಿಗಳ ಪಟ್ಟಿಯನ್ನು ಪರಿಷ್ಕರಿಸಲಾಗುತ್ತಿದೆ. ಮೃತಪಟ್ಟವರ ಹೆಸರು, ಆದಾಯ ತೆರಿಗೆ ಪಾವತಿಸುವವರು ಮತ್ತು ಒಂದೇ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಜನ ಅನಗತ್ಯವಾಗಿ ಸೌಲಭ್ಯ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇಂತಹ ದೋಷಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಗೃಹ ಲಕ್ಷ್ಮಿ ಯೋಜನೆಯಲ್ಲಿ ಫಲಾನುಭವಿಗಳ ನಿಧನವಾದ ನಂತರವೂ ಹಣ ಪಾವತಿಯಾಗುತ್ತಿರುವ ನಿದರ್ಶನಗಳು ಬೆಳಕಿಗೆ ಬಂದಿವೆ. ಸುಮಾರು 100 ಕೋಟಿ ರೂಪಾಯಿಗೂ ಹೆಚ್ಚು ಹಣ ಅನರ್ಹರಿಗೆ ಪೋಲಾಗುತ್ತಿರುವ ಅಂದಾಜಿದೆ. ಯೋಜನೆಗಳ ಉದ್ದೇಶವು ನಿಜವಾದ ಬಡವರಿಗೆ ಮತ್ತು ಅರ್ಹರಿಗೆ ತಲುಪುವುದನ್ನು ಖಚಿತಪಡಿಸಿಕೊಳ್ಳುವುದು ಸರ್ಕಾರದ ಗುರಿಯಾಗಿದೆ. ಅರ್ಹರಲ್ಲದವರು, ಸುಳ್ಳು ಮಾಹಿತಿ ನೀಡಿ ಅಥವಾ ದಾಖಲೆಗಳನ್ನು ತಿದ್ದುವ ಮೂಲಕ ಗ್ಯಾರಂಟಿ ಯೋಜನೆಗಳ ಸೌಲಭ್ಯಗಳನ್ನು ಪಡೆಯುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿವೆ. ಗೃಹಲಕ್ಷ್ಮಿ ಮತ್ತು ಅನ್ನಭಾಗ್ಯ ಯೋಜನೆಯಡಿ ಹಲವು ಕಡೆಗಳಲ್ಲಿ




ನಕಲಿ ಅಥವಾ ಅನರ್ಹ ಫಲಾನುಭವಿಗಳು ಸೇರ್ಪಡೆಯಾಗಿರುವುದು ಆಡಳಿತಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಈ ಯೋಜನೆಗಳು ಭಾರೀ ಹೊರೆಯಾಗುತ್ತಿವೆ. ಯೋಜನೆಗಳಿಗೆ ಮೀಸಲಿಡುವ ಬೃಹತ್ ಮೊತ್ತವು ಮೂಲಸೌಕರ್ಯ ಅಭಿವೃದ್ಧಿ ಮತ್ತು ಇತರ ಬಂಡವಾಳ ಹೂಡಿಕೆಯ ಮೇಲೆ ಪ್ರಭಾವ ಬೀರುತ್ತಿದೆ ಎಂಬ ಆತಂಕ ತಜ್ಞರಿಂದ ವ್ಯಕ್ತವಾಗುತ್ತಿದೆ. ಈ ಎಲ್ಲ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು, ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸಲು ಸರ್ಕಾರವು ಗಂಭೀರ ಪರಿಷ್ಕರಣೆಗೆ ಮುಂದಾಗಿದೆ. ಪಂಚ ಗ್ಯಾರಂಟಿ ಯೋಜನೆಗಳು ಜನಪರವಾಗಿದ್ದರೂ, ಅವುಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಅತ್ಯಗತ್ಯ. ಸರ್ಕಾರದ ಈ ಪರಿಷ್ಕರಣಾ ನಿರ್ಧಾರವು ಯೋಜನೆಗಳನ್ನು ಮತ್ತಷ್ಟು ಬಲಪಡಿಸುವ ಮತ್ತು ಅರ್ಹ ಫಲಾನುಭವಿಗಳಿಗೆ ನ್ಯಾಯಯುತವಾಗಿ ಸಿಗುವಂತೆ ಮಾಡುವ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆಯಾಗಲಿದೆ. ರಾಜ್ಯ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ರಾಜ್ಯದ ಜನತೆಯ ಆರ್ಥಿಕ ಭದ್ರತೆ ಮತ್ತು ಕಲ್ಯಾಣಕ್ಕಾಗಿ ಜಾರಿಗೆ ತಂದ ಪಂಚ ಗ್ಯಾರಂಟಿ ಯೋಜನೆಗಳು (ಶಕ್ತಿ, ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ ಮತ್ತು ಯುವನಿಧಿ) ರಾಜ್ಯದ ರಾಜಕೀಯ ಮತ್ತು ಆರ್ಥಿಕ ವಲಯದಲ್ಲಿ ದೊಡ್ಡ ಸಂಚಲನ ಮೂಡಿಸಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ಈ ಯೋಜನೆಗಳ ಅನುಷ್ಠಾನದಲ್ಲಿ ಕಂಡುಬರುತ್ತಿರುವ ಲೋಪದೋಷಗಳು ಮತ್ತು ಸರ್ಕಾರದ ಬೊಕ್ಕಸದ ಮೇಲಾಗುತ್ತಿರುವ ಆರ್ಥಿಕ ಒತ್ತಡವು ಸರ್ಕಾರದ ಗಂಭೀರ ಚಿಂತನೆಗೆ ಕಾರಣವಾಗಿದೆ. ಯೋಜನೆಗಳ ಘೋಷಣೆಯಾದ ಆರಂಭದಿಂದಲೂ ಹಲವು ವಿವಾದಗಳು ಕೇಳಿಬರುತ್ತಿವೆ. ತೆರಿಗೆ ಪಾವತಿದಾರರು, ಸರ್ಕಾರಿ ನೌಕರರು ಅಥವಾ ಸುಸ್ಥಿತಿಯಲ್ಲಿರುವ ಕುಟುಂಬಗಳನ್ನು ಯೋಜನೆಗಳ ವ್ಯಾಪ್ತಿಯಿಂದ ಹೊರಗಿಡಲು ಕಠಿಣ ಪರಿಶೀಲನೆ ನಡೆಸಲು ಸರ್ಕಾರ ನಿರ್ಧರಿಸಿದೆ.

**ಹೊಸದಾಗಿ ಅರ್ಜಿಗಳ ಆಹ್ವಾನ :**

ಅಕ್ರಮಗಳನ್ನು ತಡೆಗಟ್ಟಲು ಮತ್ತು ಅರ್ಹರನ್ನು ಮಾತ್ರ ಗುರುತಿಸಲು, ಪ್ರಸ್ತುತ ಇರುವ ಫಲಾನುಭವಿಗಳ ಪಟ್ಟಿಯನ್ನು ಮರು ಪರಿಶೀಲಿಸಿ, ಅವಶ್ಯಕವಿದ್ದಲ್ಲಿ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸುವ ಕುರಿತು ಚಿಂತನೆ ನಡೆಸಲಾಗುತ್ತಿದೆ. ಆಧಾರ್ ದೃಢೀಕರಣ ಮತ್ತು ನೇರ ನಗದು ವರ್ಗಾವಣೆ ಪ್ರಕ್ರಿಯೆಯನ್ನು ಇನ್ನಷ್ಟು ಬಿಗಿಗೊಳಿಸುವ ಮೂಲಕ ಮಧ್ಯವರ್ತಿಗಳ ಹಾವಳಿ ಮತ್ತು ಸೋರಿಕೆಯನ್ನು ತಡೆಗಟ್ಟಲು ಸರ್ಕಾರ ಮುಂದಾಗಿದೆ. ಯೋಜನೆಗಳ ಪರಿಷ್ಕರಣೆಯಿಂದ ಸರ್ಕಾರವು ಎರಡು ಮುಖ್ಯ ಉದ್ದೇಶಗಳನ್ನು ಹೊಂದಿದೆ

**ಸಂಪನ್ಮೂಲಗಳ ಮರುಹಂಚಿಕೆ :**

ನಿಜಕ್ಕೂ ಅಗತ್ಯವಿರುವ ಬಡ ಮತ್ತು ಕೆಳಮಧ್ಯಮ ವರ್ಗದ ಜನರಿಗೆ ಮಾತ್ರ ಸೌಲಭ್ಯಗಳು ತಲುಪುವಂತೆ ಮಾಡುವುದು. ಸರ್ಕಾರದ ಬೊಕ್ಕಸದ ಮೇಲಾಗುತ್ತಿರುವ ಅನಗತ್ಯ ಒತ್ತಡವನ್ನು ಕಡಿಮೆ ಮಾಡಿ, ರಾಜ್ಯದ ಆರ್ಥಿಕ ಸ್ಥಿರತೆಯನ್ನು ಕಾಪಾಡುವುದು.ವಿದ್ಯುತ್ ಸಂಪರ್ಕಗಳ ಬಳಕೆಯ ಮಾದರಿ (ಉದಾಹರಣೆಗೆ: ವಸತಿ ಉದ್ದೇಶದ ಬದಲು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿರುವುದು), ಟೆನೆಂಟ್ (ಬಾಡಿಗೆದಾರರ) ಮಾಹಿತಿ, ಮತ್ತು ಆಧಾರ್ ಜೋಡಣೆಯಂತಹ ದಾಖಲೆಗಳನ್ನು ಮರುಪರಿಶೀಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. 2026–27ನೇ ಸಾಲಿಗೆ ಈ ಐದು ಯೋಜನೆಗಳಿಗಾಗಿ ಸರ್ಕಾರವು ಸುಮಾರು 51,286 ಕೋಟಿ ಅನುದಾನವನ್ನು ಮೀಸಲಿಟ್ಟಿದ್ದು, ಈ ಹಣದ ಸರಿಯಾದ ಬಳಕೆಗೆ ಒತ್ತು ನೀಡಲಾಗುತ್ತಿದೆ. ಆರ್ಥಿಕ ಹೊರೆ 2026–27ರ ಬಜೆಟ್ ಅಂದಾಜಿನ ಪ್ರಕಾರ, ಈ ಐದು ಯೋಜನೆಗಳಿಗಾಗಿ ಸರ್ಕಾರ ಸುಮಾರು 51,286 ಕೋಟಿಗಳನ್ನು ವ್ಯಯಿಸುತ್ತಿದೆ. ಇದು ರಾಜ್ಯದ ಒಟ್ಟು ವೆಚ್ಚದ (ಸಾಲ ಮರುಪಾವತಿ ಹೊರತುಪಡಿಸಿ) ಸುಮಾರು ಶೇ.12ರಷ್ಟು ಭಾಗವಾಗಿದೆ.

**ಬಜೆಟ್ ಕೊರತೆ :**

ಸಿಎಜಿ ವರದಿಯು ಈ ಯೋಜನೆಗಳ ಅನುಷ್ಠಾನವು ರಾಜಸ್ವ ವೆಚ್ಚ ಮತ್ತು ರಾಜಸ್ವ ಕೊರತೆಯನ್ನು ಹೆಚ್ಚಿಸಿದೆ ಎಂದು ಗಮನಿಸಿದೆ. ಇದು ಮೂಲಸೌಕರ್ಯ ಮತ್ತು ಅಭಿವೃದ್ಧಿ ಕಾಮಗಾರಿಗಳಿಗಾಗಿ ಮೀಸಲಿಡುವ ಬಂಡವಾಳ ವೆಚ್ಚದ ಮೇಲೆ ಪರಿಣಾಮ ಬೀರಬಹುದು ಎಂಬ ಆತಂಕವೂ ಇದೆ.

# ಐಶ್ವರ್ಯ ಮಾಲ್ ಕಟ್ಟಡ ನಿರ್ಮಾಣದಲ್ಲಿ ಭಾರಿ ಗೋಲ್ಮಾಲ್ : ಇಡಿ, ಲೋಕಾಯುಕ್ತಕ್ಕೆ ದೂರು

ಬೆಂಗಳೂರು: ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕೆ.ಜಿ. ರಸ್ತೆಯಲ್ಲಿರುವ ಐಶ್ವರ್ಯ ಮಾಲ್ ಕಟ್ಟಡ ನಿರ್ಮಾಣದಲ್ಲಿ ಭಾರೀ ಅಕ್ರಮಗಳು ನಡೆದಿವೆ ಎಂದು ಆರೋಪಿಸಿರುವ ಬಿಜೆಪಿ ಮುಖಂಡ ಎನ್.ಆರ್ ರಮೇಶ್ ಅವರು ಈ ಸಂಬಂಧಿತ ಅಧಿಕಾರಿಗಳು ಮತ್ತು ನಿರ್ಮಾಣ ಸಂಸ್ಥೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ದೂರು ನೀಡಿದ್ದಾರೆ.

ನಗರಾಭಿವೃದ್ಧಿ ಇಲಾಖೆ, ಮುಖ್ಯ ಆಯುಕ್ತರು ಹಾಗೂ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತರಿಗೆ ಸಲ್ಲಿಸಿರುವ ದೂರಿನಲ್ಲಿ ಅವರು, ಮಾಲ್ ನಿರ್ಮಾಣದಲ್ಲಿ ನಡೆದಿರುವ ಅಕ್ರಮಗಳ ಮಾಹಿತಿ ನೀಡಿದ್ದಾರೆ. ಮಂಜೂರಾತಿ ಪಡೆದ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಲಾಗಿದೆ, ಆಸ್ತಿ ತೆರಿಗೆ ವಂಚನೆ ಸೇರಿದಂತೆ ಹಲವು ಗಂಭೀರ ವಂಚನೆ ಮಾಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಕೆ.ಜಿ. ರಸ್ತೆಯಲ್ಲಿರುವ ಗುಪ್ತಾ ಮಾರ್ಕೆಟ್ ಜಾಗವು ಮೂಲತಃ ಸರ್ಕಾರದ ಸ್ವತ್ತಾಗಿದ್ದು, 1953–54ರಲ್ಲಿ 99 ವರ್ಷಗಳ ಗುತ್ತಿಗೆ ಆಧಾರದ



ಮೇಲೆ ನೀಡಲಾಗಿತ್ತು. ಬಳಿಕ ಈ ಸ್ವತ್ತನ್ನು ಕಾನೂನುಬಾಹಿರವಾಗಿ ಖರೀದಿಸಿ, ಐಶ್ವರ್ಯ ಹೇರಿಹೈಟ್ಸ್ ಇನ್ಫ್ರೋ ಪ್ರವೇಟ್ ಲಿಮಿಟೆಡ್ ಹೆಸರಿನಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ದೂರಿನ ಪ್ರಕಾರ, 5 ತಳಮಹಡಿ, ನೆಲ ಅಂತಸ್ತು ಹಾಗೂ 5 ಮೇಲಂತಸ್ತುಗಳೊಂದಿಗೆ ಒಟ್ಟು 11 ಅಂತಸ್ತಿನ ಕಟ್ಟಡಕ್ಕೆ ಮಾತ್ರ ಅನುಮತಿ ದೊರೆತಿದ್ದರೂ, ಪ್ರಸ್ತುತ 5 ತಳಮಹಡಿ, ನೆಲ ಅಂತಸ್ತು ಮತ್ತು 7 ಮೇಲಂತಸ್ತುಗಳೊಂದಿಗೆ 13 ಅಂತಸ್ತಿನ ಕಟ್ಟಡ ನಿರ್ಮಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮಂಜೂರಾತಿ ಪ್ರಕಾರ 3.28 ಲಕ್ಷ ಚದರ ಅಡಿ ನಿರ್ಮಾಣಕ್ಕೆ ಅವಕಾಶವಿದ್ದರೂ, ಸುಮಾರು 3.86 ಲಕ್ಷ ಚದರ ಅಡಿ ಕಟ್ಟಡ ನಿರ್ಮಿಸಲಾಗಿದ್ದು, 57,781 ಚದರ ಅಡಿ ಹೆಚ್ಚುವರಿ ನಿರ್ಮಾಣ ನಡೆದಿದೆ ಎಂದು ಅವರು ಹೇಳಿದ್ದಾರೆ.

ಬಿದರಹಳ್ಳಿ, ರಾಂಪುರ ಹಾಗೂ ಬಿ.ಕೆ. ಹಳ್ಳಿ ಪ್ರದೇಶಗಳಿಂದ ಪಡೆದ ಡಿಆರ್‌ಸಿಗಳನ್ನು ಮೆಜೆಸ್ಟಿಕ್‌ನ ಎ ವಲಯದಲ್ಲಿ ಬಳಸಲಾಗಿದೆ. ಸಿ ವಲಯದ ಡಿಆರ್‌ಸಿಗಳನ್ನು ಎ ವಲಯದಲ್ಲಿ ಬಳಸುವಾಗ ಶೇ.30 ರಷ್ಟು ಕಡಿತ ಮಾಡುವ ಕಾನೂನು ಅನ್ವಯಿಸಬೇಕಾಗಿದ್ದರೂ, ಅದನ್ನು ಪಾಲಿಸದೆ ಸುಮಾರು 352.72 ಶೇಕಡಾ ವ್ಯತಿರಿಕ್ತ ನಿರ್ಮಾಣ ನಡೆಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಕುರಿತು 2018ರಿಂದಲೇ ಹಲವು ಬಾರಿ ದೂರುಗಳನ್ನು ಸಲ್ಲಿಸಿದ್ದರೂ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆರೋಪಿಸಿರುವ ರಮೇಶ್ ಅವರು ಕಟ್ಟಡಕ್ಕೆ ಯಾವುದೇ ಕಾರಣಕ್ಕೂ ಸ್ವಾಧೀನ ಪತ್ರ (ಒಸಿ) ನೀಡಬಾರದು ಎಂದು ಆಗ್ರಹಿಸಿದ್ದಾರೆ. ಆದರೆ, ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಜಂಟಿ ಆಯುಕ್ತರು 2026ರ ಮಾರ್ಚ್ 7ರಂದು ಸುಮಾರು 27.91 ಕೋಟಿ ಮೊತ್ತದ ಡಿಮ್ಯಾಂಡ್ ನೋಟಿಸ್ ನೀಡಿ, ಹಣ ಪಾವತಿಸಿ ಒಸಿ ಪಡೆಯುವಂತೆ ಸೂಚಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಅವರು ದೂರಿದ್ದಾರೆ. ಸುಮಾರು 3.86 ಲಕ್ಷ ಚದರ ಅಡಿ ನಿರ್ಮಾಣವಾಗಿದ್ದರೂ, ಕೇವಲ 6,500 ಚದರ ಅಡಿ ವಿಸ್ತೀರ್ಣದ ಕಟ್ಟಡವನ್ನು ಮಾತ್ರ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ದಾಖಲಿಸಿ ತೆರಿಗೆ ಪಾವತಿಸಲಾಗಿದೆ. ಇದರಿಂದ ಪಾಲಿಕೆಗೆ ಭಾರೀ ನಷ್ಟ ಉಂಟಾಗಿದೆ ಎಂದು ಆರೋಪಿಸಲಾಗಿದೆ. ನಗರ ಯೋಜನೆ ಹಾಗೂ ಕಂದಾಯ ವಿಭಾಗದ ಕೆಲ ಹಿರಿಯ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ವಂಚನೆ ಹಾಗೂ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ತನಿಖೆ ನಡೆಸುವಂತೆ ಇಡಿ ಮತ್ತು ಲೋಕಾಯುಕ್ತಕ್ಕೆ ದಾಖಲೆಗಳೊಂದಿಗೆ ದೂರು ಸಲ್ಲಿಸಲಾಗಿದೆ ಎಂದು ರಮೇಶ್ ತಿಳಿಸಿದ್ದಾರೆ.


ಅಲ್ಲದೆ, ಕಟ್ಟಡಕ್ಕೆ ನೀಡಲು ಮುಂದಾಗಿರುವ ಅಧಿಕಾರಿಗಳ ವಿರುದ್ಧ ಕರ್ನಾಟಕ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

## ಉದ್ಧವ್ ಠಾಕ್ರೆ ಬಣದ 7 ಸಂಸದರು ಎನ್‌ಡಿಎ ಕಡೆಗೆ : ಮಹಾರಾಷ್ಟ್ರ ರಾಜಕಾರಣದಲ್ಲೂ ಬಿರುಗಾಳಿ

ಮುಂಬೈ: ಬಂಗಾಳ ಮಾದರಿಯಲ್ಲೇ ಮಹಾರಾಷ್ಟ್ರ ರಾಜಕಾರಣದಲ್ಲೂ ರಾಜಕೀಯ ಸಂಚಲನ ಸೃಷ್ಟಿಯಾಗುವ ಸಾಧ್ಯತೆಗಳಿವೆ.ಶಿವಸೇನೆಯ ಉದ್ಧವ್ ಠಾಕ್ರೆ ಬಣದ ಒಟ್ಟು 9 ಲೋಕಸಭಾ ಸಂಸದರ ಪೈಕಿ ಬರೋಬ್ಬರಿ ಏಳು ಮಂದಿ ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ನೇತೃತ್ವದ ಶಿವಸೇನೆ ಬಣದೊಂದಿಗೆ ಸಂಪರ್ಕದಲ್ಲಿದ್ದಾರೆ ಎಂಬ ಮಾಹಿತಿ ಹೊರಬಿದ್ದಿದೆ.

ಈ ಬೆಳವಣಿಗೆಯು ರಾಜ್ಯದಲ್ಲಿ ಮತ್ತೊಂದು ದೊಡ್ಡ ರಾಜಕೀಯ ಹೈಡ್ರಾಮಕ್ಕೆ ಮುನ್ನುಡಿ ಬರೆಯುವ ಸಾಧ್ಯತೆಗಳಿದ್ದು, ಮಾಹಿತಿಗಳ ಪ್ರಕಾರ, ಮುಖ್ಯಮಂತ್ರಿ ಏಕನಾಥ್ ಶಿಂಧೆ ಮತ್ತು ಅವರ ಪುತ್ರ, ಲೋಕಸಭಾ ಸಂಸದ ಶ್ರೀಕಾಂತ್ ಶಿಂಧೆ ಅವರು ಕಳೆದ ಆರು ತಿಂಗಳಿನಿಂದ ಉದ್ಧವ್ ಠಾಕ್ರೆ ಬಣದ ಸಂಸದರೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು ಎನ್ನಲಾಗಿದೆ. ಇದರ ಮುಂದುವರಿದ ಭಾಗವಾಗಿ, ಜೂನ್ 7 ರಂದು ನವದೆಹಲಿಯಲ್ಲಿ ಏಕನಾಥ್ ಶಿಂಧೆ ಹಾಗೂ ಉದ್ಧವ್ ಬಣದ ಸಂಸದರ ನಡುವೆ ಅತ್ಯಂತ ಗೌಪ್ಯ ಸಭೆಯೊಂದು ನಡೆದಿದೆ ಎನ್ನಲಾಗಿದೆ. ಈ ಸಭೆಯ ಬೆನ್ನಲ್ಲೇ ಏಳು ಸಂಸದರು ಶಿಂಧೆ ಬಣಕ್ಕೆ ಬೆಂಬಲ ಸೂಚಿಸಲು ಸಂಪೂರ್ಣ ಸಿದ್ಧತೆ ಮಾಡಿಕೊಂಡಿದ್ದಾರೆ ಎಂಬ ವದಂತಿಗಳು ರಾಜಕೀಯ ವಲಯದಲ್ಲಿ ದಟ್ಟವಾಗಿವೆ. ಕೇಂದ್ರ ಸಚಿವ ಸ್ಥಾನದ ಆಫರ್ ಮತ್ತು ಅಮಿತ್ ಶಾ ಭೇಟಿ ಈ ರಾಜಕೀಯ ಬೆಳವಣಿಗೆಗಳ ನಡುವೆ, ಇತ್ತೀಚೆಗೆ ಏಕನಾಥ್ ಶಿಂಧೆ ಅವರು ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಸುದೀರ್ಘ ಚರ್ಚೆ ನಡೆಸಿದ್ದರು. ಮೂಲಗಳ ಪ್ರಕಾರ, ಶಿಂಧೆ ಬಣಕ್ಕೆ ಸೇರಲಿರುವ ಹೊಸ ಸಂಸದರಲ್ಲಿ ಒಬ್ಬರಿಗೆ ಕೇಂದ್ರ ಸಚಿವ ಸಂಪುಟದಲ್ಲಿ ಪ್ರಮುಖ ಸ್ಥಾನ ಸಿಗುವ ಸಾಧ್ಯತೆ ಇದೆ. ಈ ಆಫರ್ ಉದ್ಧವ್ ಬಣದ ಸಂಸದರನ್ನು ಆಕರ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎನ್ನಲಾಗಿದೆ. ಪ್ರಸ್ತುತ ಉದ್ಧವ್ ಠಾಕ್ರೆ ಬಣದಲ್ಲಿರುವ 9 ಲೋಕಸಭಾ ಸಂಸದರ ಪಟ್ಟಿ ಇಲ್ಲಿದೆ. ಇವರಲ್ಲಿ ಏಳು ಮಂದಿ ಶಿಂಧೆ ಬಣದತ್ತ ಮುಖ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅರವಿಂದ್ ಸಾವಂತ್ (ಮುಂಬೈ ದಕ್ಷಿಣ), ಸಂಜಯ್ ದಿನ ಪಾಟೀಲ್ (ಮುಂಬೈ ಈಶಾನ್ಯ), ಅನಿಲ್ ದೇಸಾಯಿ (ಮುಂಬೈ ದಕ್ಷಿಣ ಮಧ್ಯ), ಸಂಜಯ್ ದೇಶಮುಖ್ (ಯವತಾಲ್–ವಾಶಿಂ), ನಾಗೇಶ ಪಾಟೀಲ ಅಷ್ಟಿಕರ್ (ಹಿಂಗೋಲಿ), ಸಂಜಯ್ ಹರಿಭಾವು ಜಾಧವ್ (ಪರ್ಭಾನಿ), ರಾಜಭಾವು ವಾಜೆ (ನಾಸಿಕ್)ಭೌಸಾಹೇಬ್ ವಕ್ಚೌರೆ (ಶಿರಡಿ) ಹಾಗೂ ಓಂಪ್ರಕಾಶ್ ರಾಜೇನಿಂಬಾಳ್ಕರ್ (ಧಾರಾಶಿವ್ / ಒಸ್ಮಾನಾಬಾದ್) ಅವರುಗಳು ಠಾಕ್ರೆ ಬಣ ತೊರೆಯುವವರು ಎನ್ನಲಾಗಿದೆ.



ಪಕ್ಷಾಂತರ ನಿಷೇಧ ಕಾಯ್ದೆ ಪ್ರಕಾರ, ಯಾವುದೇ ಒಂದು ರಾಜಕೀಯ ಪಕ್ಷದ ಜನಪ್ರತಿನಿಧಿಗಳು ಶಿಕ್ಷೆಯಿಂದ ಪಾರಾಗಿ ಮತ್ತೊಂದು ಪಕ್ಷದೊಂದಿಗೆ ವಿಲೀನವಾಗಬೇಕಾದರೆ ಅಥವಾ ಪ್ರತ್ಯೇಕ ಗುಂಪು ಎಂದು ಗುರುತಿಸಿಕೊಳ್ಳಬೇಕಾದರೆ, ಒಟ್ಟು ಸಂಸದರ/ಶಾಸಕರ ಪೈಕಿ ಮೂರನೇ ಎರಡರಷ್ಟು ಸದಸ್ಯರ ಬಲ ಇರಬೇಕಾಗುತ್ತದೆ.ಪ್ರಸ್ತುತ ಉದ್ಧವ್ ಬಣದಲ್ಲಿ 9 ಸಂಸದರಿದ್ದಾರೆ. ಇದರ 2/3ರಷ್ಟು ಎಂದರೆ ಕನಿಷ್ಠ 6 ಸಂಸದರು ಒಟ್ಟಿಗೆ ಉದ್ಧವ್ ಬಣವನ್ನು ತೊರೆಯಬೇಕಾಗುತ್ತದೆ. ಈಗ 7 ಸಂಸದರು ಶಿಂಧೆ ಬಣದ ಸಂಪರ್ಕದಲ್ಲಿದ್ದಾರೆ ಎಂಬ ಮಾಹಿತಿ ನಿಜವೇ ಆದಲ್ಲಿ, ಅವರು ಯಾವುದೇ ಕಾನೂನು ಸಂಕಷ್ಟವಿಲ್ಲದೆ ಅಧಿಕೃತವಾಗಿ ಶಿಂಧೆ ಬಣವನ್ನು ಸೇರಿಕೊಳ್ಳಬಹುದು ಮತ್ತು ಅವರ ಸಂಸದ ಸ್ಥಾನಕ್ಕೂ ಯಾವುದೇ ಧಕ್ಕೆ ಬರುವುದಿಲ್ಲ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳು ಹತ್ತಿರ ಬರುತ್ತಿರುವ ಈ ಸಮಯದಲ್ಲಿ ಈ ಬೆಳವಣಿಗೆಯು ಉದ್ಧವ್ ಠಾಕ್ರೆ ಅವರಿಗೆ ಭಾರಿ ಹಿನ್ನಡೆಯನ್ನು ಉಂಟುಮಾಡಿದರೆ, ಏಕನಾಥ್ ಶಿಂಧೆ ಮತ್ತು ಮಹಾಯುತಿ (ಬಿಜೆಪಿ–ಶಿವಸೇನೆ–ಎನ್‌ಸಿಪಿ) ಮೈತ್ರಿಗೆ ದೆಹಲಿ ಮಟ್ಟದಲ್ಲಿ ಮತ್ತಷ್ಟು ಬಲ ತಂದುಕೊಡಲಿದೆ.

# "ವರ್ತಮಾನವೇ ದೀಪ, ಭವಿಷ್ಯವೇ ರಹಸ್ಯ : ಶ್ರೀಕೃಷ್ಣನ ಜೀವನ ಪಾಠ"

ದ್ವಾಪರ ಯುಗದ ಒಂದು ಸುವರ್ಣ ಸಂಜೆ. ಯಮುನಾ ನದಿಯ ತೀರದಲ್ಲಿ ಸೂರ್ಯಾಸ್ತದ ಕೆಂಪು ಬಣ್ಣ ಪಸರಿಸಿತ್ತು. ಶ್ರೀಕೃಷ್ಣನು ನದಿಯ ದಂಡೆಯ ಮೇಲಿದ್ದ ಕಲ್ಲಿನ ಮೇಲೆ ಕುಳಿತು ಕೊಳಲನ್ನು ನುಡಿಸುತ್ತಿದ್ದನು. ಆ ಮಧುರ ನಾದಕ್ಕೆ ಮಂತ್ರಮುಗ್ಧನಾದ ಒಬ್ಬ ಪರಮ ಭಕ್ತನು ಕೃಷ್ಣನ ಪಾದಗಳ ಬಳಿ ಬಂದು ಕುಳಿತನು.

ಕೊಳಲಿನ ನಾದ ನಿಂತಾಗ, ಭಕ್ತನ ಮನಸ್ಸಿನಲ್ಲಿದ್ದ ಒಂದು ತೀವ್ರವಾದ ಜಿಜ್ಞಾಸೆ ಹೊರಬಂತು. ಅವನು ಕೃಷ್ಣನ ಮುಖವನ್ನು ನೋಡುತ್ತಾ ಕೇಳಿದನು: "ಹೇ ಮಾಧವ, ನನಗೊಂದು ದೊಡ್ಡ ಸಂಶಯವಿದೆ. ನೀನು ತ್ರಿಕಾಲ ಜ್ಞಾನಿ. ಆದರೆ ನಿನ್ನ ಸೃಷ್ಟಿಯಾದ ನಾವು, ವರ್ತಮಾನ ಕಾಲದಲ್ಲಿ ಇದ್ದುಕೊಂಡೇ ಭವಿಷ್ಯತ್ತಿನಲ್ಲಿ ಏನಾಗಲಿದೆ ಎಂದು ನೋಡಲು ಏಕೆ ಸಾಧ್ಯವಿಲ್ಲ? ಭವಿಷ್ಯವನ್ನು ನೋಡುವ ಶಕ್ತಿ ನಮಗೇಕೆ ಇಲ್ಲ?" ಶ್ರೀಕೃಷ್ಣನು ತನ್ನ ಎಂದಿನ ಮಂದಹಾಸದೊಂದಿಗೆ ಭಕ್ತನನ್ನು ನೋಡಿದನು. "ಅದಕ್ಕೆ ಉತ್ತರವನ್ನು ಒಂದು ಸಣ್ಣ ಉದಾಹರಣೆಯೊಂದಿಗೆ ನೀಡುತ್ತೇನೆ, ಬಾ ನನ್ನೊಂದಿಗೆ," ಎಂದು ಹೇಳಿ ಭಕ್ತನನ್ನು ಕರೆದುಕೊಂಡು ನದಿಯ ಪಕ್ಕದಲ್ಲಿದ್ದ ಒಂದು ದಟ್ಟವಾದ ಕಾಡಿನ ಕಡೆಗೆ ನಡೆದನು. ಕಾಡಿನೊಳಗೆ ಹೋಗುತ್ತಿದ್ದಂತೆ ಕತ್ತಲಾಗುತ್ತಾ ಬಂತು. ಕೃಷ್ಣನು ಭಕ್ತನ ಕೈಗೆ ಒಂದು ಸಣ್ಣ ಕೈದೀಪ ಅನ್ನು ನೀಡಿದನು. ಆ ದೀಪದ ಬೆಳಕು ಕೇವಲ ನಾಲ್ಕೈದು ಹೆಜ್ಜೆಗಳಷ್ಟು



ಮುಂದಿರುವ ದಾರಿಯನ್ನು ಮಾತ್ರ ಕಾಣಿಸುವಂತೆ ಮಾಡುತ್ತಿತ್ತು.

ಕೃಷ್ಣನು ಭಕ್ತನಿಗೆ ಹೇಳಿದನು, 'ಈಗ ನೀನು ಈ ದೀಪದ ಬೆಳಕಿನಲ್ಲಿ ಮುನ್ನಡೆ." ಭಕ್ತನು ದೀಪ ಹಿಡಿದು ಹೆಜ್ಜೆ ಇಡಲು ಶುರು ಮಾಡಿದನು. ನಾಲ್ಕು ಹೆಜ್ಜೆ ನಡೆದ ನಂತರ, ಮತ್ತೆ ಮುಂದಿನ ನಾಲ್ಕು ಹೆಜ್ಜೆಗಳ ದಾರಿ ಕಾಣಿಸುತ್ತಿತ್ತು. ಹೀಗೆಯೇ ಅವರು ಕಾಡಿನ ಮಧ್ಯಭಾಗ ತಲುಪಿದರು. ಆಗ ಕೃಷ್ಣನು ಭಕ್ತನನ್ನು ತಡೆದು ಕೇಳಿದನು, "ಭಕ್ತಾ, ನೀನು ಕಾಡಿನ ಆರಂಭದಲ್ಲಿ ನಿಂತಾಗ, ನಿನಗೆ ಈ ಕಾಡಿನ ಕೊನೆಯ ದಾರಿ ಕಾಣಿಸುತ್ತಿತ್ತೇ?" ಭಕ್ತನು ಹೇಳಿದನು, "ಇಲ್ಲ ಕೃಷ್ಣಾ, ಈ ಪುಟ್ಟ ದೀಪದ ಬೆಳಕು ಕೇವಲ ನಾಲ್ಕು ಹೆಜ್ಜೆ ಮಾತ್ರ ಕಾಣಿಸುವಂತೆ ಮಾಡುತ್ತದೆ. ನಾನು ಮುಂದೆ ಹೋದಂತೆಲ್ಲಾ ದಾರಿ ತಾನಾಗಿಯೇ ಕಾಣಿಸುತ್ತಾ ಹೋಯಿತು." ಆಗ ಶ್ರೀಕೃಷ್ಣನು ನಗುತ್ತಾ ಭಕ್ತನ ಹೆಗಲ ಮೇಲೆ ಕೈಹಾಕಿ ಹೀಗೆ ಉತ್ತರಿಸಿದನು: "ನೋಡು ಭಕ್ತಾ, ನಿನ್ನ ಕೈಯಲ್ಲಿರುವ ದೀಪವೇ 'ವರ್ತಮಾನ ಕಾಲ'. ಅದು ನಿನಗೆ ಎಷ್ಟು ಅಗತ್ಯವೋ ಅಷ್ಟು ದಾರಿಯನ್ನು ಮಾತ್ರ ತೋರಿಸುತ್ತದೆ. ಒಂದು ವೇಳೆ ಈ ದೀಪ ಇಡೀ ಕಾಡಿನ ದಾರಿಯನ್ನು ಒಂದೇ ಬಾರಿಗೆ ತೋರಿಸಿದರೆ ಏನಾಗಬಹುದು ಯೋಚಿಸು? ಮುಂದೆ ಎಲ್ಲೋ ಒಂದು ಕಡೆ ಇರುವ ಹಳ್ಳ, ಮುಳ್ಳು ಅಥವಾ ಮಲಗಿರುವ ಹಾವನ್ನು ನೀನು ಇಲ್ಲೇ ನಿಂತು ನೋಡಿಬಿಟ್ಟರೆ, ಭಯದಿಂದ ನೀನು ಮುಂದಿನ ಹೆಜ್ಜೆಯನ್ನೇ ಇಡುವುದಿಲ್ಲ. ನಡೆಯುವುದನ್ನೇ ನಿಲ್ಲಿಸಿಬಿಡುತ್ತೀಯೆ."

**ಕೃಷ್ಣನು ಮುಂದುವರಿಸುತ್ತಾ ಹೇಳಿದನು:**

"ಮನುಷ್ಯನಿಗೆ ಭವಿಷ್ಯ ಮೊದಲೇ ತಿಳಿದುಬಿಟ್ಟರೆ, ಅವನು ವರ್ತಮಾನದಲ್ಲಿ ಕರ್ಮ ಮಾಡುವುದನ್ನೇ ಬಿಟ್ಟುಬಿಡುತ್ತಾನೆ. ಒಳ್ಳೆಯ ಭವಿಷ್ಯವಿದ್ದರೆ ಅಹಂಕಾರ ಪಡುತ್ತಾನೆ, ಕೆಟ್ಟ ಭವಿಷ್ಯವಿದ್ದರೆ ನಿರಾಶೆಗೊಂಡು ಕುಳಿತುಕೊಳ್ಳುತ್ತಾನೆ. ಭವಿಷ್ಯವು ಒಂದು ರಹಸ್ಯವಾಗಿದ್ದಾಗ ಮಾತ್ರ ಜೀವನದಲ್ಲಿ ಕುತೂಹಲ, ಉತ್ಸಾಹ ಮತ್ತು ಆನಂದ ಇರುತ್ತದೆ. ನಾಳೆ ಏನಾಗುತ್ತದೋ ಎಂಬ ಅರಿವಿಲ್ಲದೆ, ಇವತ್ತಿನ ದಿನವನ್ನು ಪೂರ್ಣ ಪ್ರಮಾಣದಲ್ಲಿ ಬದುಕುವುದೇ ಜೀವನ. ಕೃಷ್ಣನ ಮಾತುಗಳನ್ನು ಕೇಳಿದ ಭಕ್ತನಿಗೆ ಜ್ಞಾನೋದಯವಾಯಿತು. ಭವಿಷ್ಯವನ್ನು ತಿಳಿಯಲು ಹಂಬಲಿಸುವುದಕ್ಕಿಂತ, ಭಗವಂತ ಕೊಟ್ಟಿರುವ ವರ್ತಮಾನ ಕಾಲದಲ್ಲಿ ನೆಮ್ಮದಿಯಿಂದ, ಧರ್ಮದ ಹಾದಿಯಲ್ಲಿ ಬದುಕುವುದು ಶ್ರೇಷ್ಠ ಎಂದು ಅವನು ಅರಿತುಕೊಂಡನು. ಭಕ್ತನು ಕೃಷ್ಣನ ಪಾದಗಳಿಗೆ ನಮಸ್ಕರಿಸಿದನು.



ಪ್ರಶಾಂತಭಟ್
ಕೋಟೇಶ್ವರ

# ಜೀವನದ ಏಳು ಹಂತಗಳು..ಶೇಕ್ಸ ಪಿಯರ್

ತಮ್ಮ 'ಆ?ಯಸ್ ಯು ಲೈಕ್ ಇಟ್' ' ಎಂಬ ಕವನ ಸಂಕಲನದಲ್ಲಿ ಇಂಗ್ಲೀಷ್ ನ ಖ್ಯಾತ ಸಾಹಿತಿ, ಕವಿ ಹಾಗೂ ನಾಟಕಕಾರ ಶೇಕ್ಸ್ ಪಿಯರ್ ಮನುಷ್ಯ ಜೀವನದ ಏಳು ಹಂತಗಳನ್ನು ಅರ್ಥಪೂರ್ಣವಾಗಿ ವಿವರಿಸಿದ್ದಾನೆ. ಕವನದ ಶೀರ್ಷಿಕೆ 'ದ ಸೆವೆನ್ ಸ್ಟೇಜಸ್ ಆಫ್ ಮ್ಯಾನ್' ಎಂದು.

ಕವನದ ಆರಂಭದಲ್ಲಿ 'ಈ ಜಗವೇ ಒಂದು ನಾಟಕ ರಂಗ ' ಎಂದು ಹೇಳಿರುವ ಆತ ನಾವೆಲ್ಲರೂ ಇಲ್ಲಿ ಪಾತ್ರಧಾರಿಗಳು. ಪ್ರತಿಯೊಬ್ಬರಿಗೂ ಅವರದ್ದೇ ಆದ ಸಮಯದಲ್ಲಿ ಬದುಕೆಂಬ ರಂಗಭೂಮಿಯ ಮೇಲೆ ಪ್ರವೇಶ ಮತ್ತು ನಿರ್ಗಮನಗಳು ಇವೆ. ಪ್ರತಿಯೊಬ್ಬ ಮನುಷ್ಯನು ಬದುಕು ಎಂಬ ರಂಗದ ಮೇಲೆ ಹಲವಾರು ಪಾತ್ರಗಳನ್ನು ಮಾಡುತ್ತಾನೆ ಎಂಬ ಸಾಲಿನ ಅರ್ಥ ಅದೆಷ್ಟು ಅದ್ಭುತವಾಗಿದೆ ಅಲ್ವೇ.... ನಿಜ ಹೆತ್ತವರಿಗೆ ಮಕ್ಕಳಾಗಿ, ಜೊತೆಗೆ ಹುಟ್ಟಿದವರಿಗೆ ಒಡಹುಟ್ಟಿದವರಾಗಿ, ಸಂಗಾತಿಯಾಗಿ,ತಂದೆ ತಾಯಿಗಳಾಗಿ, ಸ್ನೇಹಿತರಾಗಿ, ಬಂಧುಗಳಾಗಿ,ಗುರುವಾಗಿ, ಹಿರಿಯನಾಗಿ ಓರ್ವ ಮನುಷ್ಯ ಹೇಗೆ ತನ್ನ ಬದುಕಿನಲ್ಲಿ ತನ್ನ ಜೊತೆಗೆ ಬೆಸೆದ ನೂರಾರು ಜನರೊಂದಿಗೆ ಒಂದಲ್ಲ ಒಂದು ರೀತಿಯ ವಿಭಿನ್ನವಾದ ನಂಟನ್ನು ಹೊಂದಿರುತ್ತಾನೆ. ಮುಂದುವರೆದು ಕವಿ ಆತನ ಬದುಕನ್ನು ವಿವಿಧ ಹಂತಗಳಲ್ಲಿ ನಾವು ನೋಡಬಹುದು ಎಂದು ಹೇಳುವ ಮೂಲಕ ಮನುಷ್ಯ ಬದುಕಿನ ಏಳು ಹಂತಗಳನ್ನು ಅನಾವರಣ ಮಾಡುತ್ತಾನೆ. ಅವುಗಳೆಂದರೆ ಶೈಶವ, ಬಾಲ್ಯ, ಹರಯ,ಯವ್ವನ, ಪ್ರೌಢ,ಮಧ್ಯ ವಯಸ್ಸು, ವೃದ್ಧಾಪ್ಯ, ಶೈಶವದಲ್ಲಿ ತಾಯಿಯ ಗರ್ಭದಿಂದ ಹೊರಬರುವ ಮಗು ಪಾಲಿಸುವವರ ಕೈಯಲ್ಲಿನ ಕೂಸಾಗಿರುತ್ತದೆ. ಹೊಟ್ಟೆ ಹಸಿದಾಗ ಅಳುವ ಅಥವಾ ತನ್ನ ಯಾವುದೇ ಅವಶ್ಯಕತೆಗಳ ಸಲುವಾಗಿ ಅಳುವ ಮೂಲಕ ವ್ಯಕ್ತಪಡಿಸುವ ಮಗು ಹೊಟ್ಟೆ ತುಂಬಿದ ನಂತರ ಅದನ್ನು ಹೆಚ್ಚಾದದ್ದನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ ಕಕ್ಕುವ ಮೂಲಕ ಹೊರ ಹಾಕುತ್ತದೆ. ಶೈಶವಾವಸ್ಥೆಯಲ್ಲಿರುವ ಮಗುವನ್ನು ಪಾಲಿಸಲೇಬೇಕು. ಯಾಕೆಂದರೆ ತನ್ನದೇ ಕೆಲಸಗಳನ್ನು ಮಾಡಿಕೊಳ್ಳಲು ಆಗದಷ್ಟು ಮಗು ಪರಾಧೀನವಾಗಿ ಬದುಕುತ್ತದೆ. ನಂತರ ನಿಧಾನವಾಗಿ ಬೆಳವಣಿಗೆಯ ಹಂತವನ್ನು ತಲುಪುತ್ತದೆ. ಶೇಷಾವಸ್ಥೆಯ 2 ವರ್ಷಗಳಲ್ಲಿ ಮಗು ಹೊರಳಿ



ಬೀಳುವುದರಿಂದ ಹಿಡಿದು ಅಂಬೆಗಾಲಿಟ್ಟು ನಂತರ ನಡೆಯುವವರೆಗೆ ದೈಹಿಕವಾಗಿ ವಿಕಸಿತಗೊಳ್ಳುತ್ತಾ ಸಾಗುತ್ತದೆ.. ಮಾನಸಿಕವಾಗಿಯೂ ಬೆಳವಣಿಗೆಯನ್ನು ಕಾಣುವ ಮಗು ನಿಧಾನವಾಗಿ ತಪ್ಪು ಹೆಜ್ಜೆ ಇಡುತ್ತಾ ಒಂದೊಂದೇ ಮಾತುಗಳನ್ನು ಆಡುತ್ತಾ ಇತರರನ್ನು ಅನುಕರಿಸುತ್ತಾ ಬೆಳೆಯುತ್ತದೆ. ಹನಿ ಹಾಲನ್ನು ಗುಟುಕರಿಸಲು ಮಾತ್ರ ಸಾಧ್ಯವಿರುವ ಮಗು ನಿಧಾನವಾಗಿ ಮೆದು ಆಹಾರವನ್ನು ಸೇವಿಸುತ್ತಾ ನಂತರ ಗಟ್ಟಿಯಾದ ಆಹಾರವನ್ನು ಸೇವಿಸುವುದನ್ನು ಕಲಿಯುತ್ತದೆ ಹಲ್ಲುಗಳು ಮೂಡಿದಂತೆ ಕಚ್ಚಿ ತಿನ್ನುವ ರೂಢಿಯನ್ನು ಮಾಡಿಕೊಳ್ಳುತ್ತದೆ ಆದರೂ ಕೂಡ ಶೈಶವ ವಸ್ಥೆಯಲ್ಲಿ ಮಕ್ಕಳು ಒಂದು ರೀತಿಯಲ್ಲಿ ಅದರಲ್ಲೂ ತನ್ನ ತಾಯಿಯ ಮೇಲೆ ಮಗು ಸಂಪೂರ್ಣವಾಗಿ ಅವಲಂಬನೆ ಹೊಂದಿರುತ್ತದೆ. ಒಂದೊಮ್ಮೆ ಬೆಳೆದು ನಿಂತ ಮಗು ಲೋಕಜ್ಞಾನವನ್ನು ಪಡೆಯಲು ಬದುಕಿನ ಮುಖ್ಯಘಟ್ಟವಾದ ಶೈಕ್ಷಣಿಕ ಹಂತಕ್ಕೆ ತಲುಪುತ್ತದೆ. ಈ ಸಮಯದಲ್ಲಿ ಮಗು ಪ್ರತಿಯೊಂದನ್ನು ಕುತೂಹಲದ ದೃಷ್ಟಿಯಿಂದ ನೋಡುತ್ತಾ ಶಾಲೆಗೆ ಹೋಗುವ ಪ್ರತಿ ಕ್ಷಣದಲ್ಲೂ ನಿಧಾನವಾಗಿ ನಡೆಯುತ್ತಾ ಬದುಕಿನ ಹೊಸ ಹೊಸ ವಿಷಯಗಳನ್ನು ಕಲಿಯುತ್ತಾ ಹೊಸ ಬದುಕಿನತ್ತ ಮುಖ ಮಾಡುತ್ತದೆ.

ಮುಂಜಾನೆಯ ತಾಜಾತನವನ್ನು ಹೊತ್ತು ಮಗುವಿನ ಮುದ್ದು ಮುಖ,ಹೊಳೆಯುವ ಕಣ್ಣುಗಳು ಹಾಗೂ ತಲೆ ಕೂದಲು ಮಗುವಿನ ಎಳೆತನವನ್ನು ಎತ್ತಿ ತೋರಿಸುತ್ತದೆ. ಅತ್ಯಂತ ಸಾವಕಾಶವಾಗಿ ಸಾಗುವ ಮೃದ್ವಂಗಿಯಂತೆ ತನ್ನಿಚ್ಛೆಯ ವಿರುದ್ಧವಾಗಿ ಮಗು ಶಾಲೆಗೆ ತೆರಳುತ್ತಾನೆ ಎಂದು ಕವಿ ಬಣ್ಣಿಸಿದ್ದಾನೆ ನಂತರ ಬರುವುದು ಯೌವನದ ಹಂತ ಸಣ್ಣಗೆ ಶಬ್ದ ಮಾಡುತ್ತಾ ಉರಿಯುವ ಬರ್ನರಿನಂತೆ ತಾನು ಪ್ರೀತಿಸುವ ಯುವತಿಯ ಪ್ರೀತಿಯಲ್ಲಿ, ಆಕೆಯ ಕಣ್ಣ ಹೊಳಪಿನಲ್ಲಿ ಕಳೆದುಹೋಗುವ ಹಂತವಿದು. ನಂತರ ಓರ್ವ ಶಪಥಗೈದ ಸೈನಿಕರಂತೆ ಆತನ ಬದುಕು ತಿರುವನ್ನು ತೆಗೆದುಕೊಳ್ಳುತ್ತದೆ. ಚಿರತೆಯ ಭಾವವನ್ನು ಹೊಂದಿದಂತೆ ಆತ ಮತ್ತೊಂದು ಹಂತವನ್ನು ತಲುಪುತ್ತಾನೆ. ತಮ್ಮ ಆತ್ಮ ಗೌರವದ ಕುರಿತು ಅತಿಯಾದ ಅಭಿಮಾನ ಮತ್ತು ಸೂಕ್ಷ್ಮತೆಯನ್ನು ಹೊಂದಿರುವ ಈ ಹಂತದಲ್ಲಿ ಸಿಡುಕುತನ ಸಾಮಾನ್ಯ. ಅತ್ಯಂತ ಪ್ರಾಣಾಪಾಯದ ಸಮಯದಲ್ಲಿಯೂ ಆತ್ಮ ಗೌರವಕ್ಕಾಗಿ ಹೊಡೆದಾಡುವ ಆತನ ಕೀರ್ತಿ ನೀರ ಮೇಲಣ ಗುಳ್ಳೆಯಂತದ್ದು ಎಂಬುದನ್ನು ಆತ ನವಿರಾಗಿ ತಿಳಿಸಿದ್ದು ಪ್ರಸಿದ್ಧಿ ಎನ್ನುವುದು ಮನುಷ್ಯನ ಬದುಕಿನಲ್ಲಿ ಅತ್ಯಂತ ಕ್ಷಣಿಕ ಎಂದು ಹೇಳುತ್ತಾನೆ. ಇದು ಆತನ ಬದುಕಿನ ನಾಲ್ಕನೇ ಹಂತ. ಐದನೇ ಹಂತದಲ್ಲಿ ಆತ ಅತ್ಯಂತ ನೇರವಾಗಿ ಹಾಗೂ ನಿಖರವಾಗಿ ಮಾತನಾಡುವ ನ್ಯಾಯಾಧೀಶನಾಗುತ್ತಾನೆ. ಅಧಿಕಾರ ಅವನ ಕೈಯಲ್ಲಿ ಇರುತ್ತದೆ. ಒಂದು ರೀತಿಯಲ್ಲಿ ಸಂಪೂರ್ಣವಾಗಿ ಅರಳಿದ ವ್ಯಕ್ತಿತ್ವ ಆತನದಾಗಿರುತ್ತದೆ. ಅದರ ಪರಿಣಾಮವಾಗಿ ಆತ ಸುಂದರವಾದ ದುಂಡಗಿನ ಹೊಟ್ಟೆ, ನಿಖರ ಕಣ್ಣುಗಳನ್ನು ಹೊಂದಿದ ಬುದ್ಧಿವಂತ ವ್ಯಕ್ತಿಯಾಗುತ್ತಾನೆ ಔಪಚಾರಿಕವಾಗಿ ಮಾತನಾಡುವ ಜಾಣ್ಮೆ ಆತನದಾಗಿರುತ್ತದೆ ಇದು ಆತನ ಬದುಕಿನ ಐದನೇ ಹಂತ. ನಂತರ ಬರುವುದು ಪ್ಯಾಂಟಲೂನ್ ಎಂಬ ಆತನ ಬದುಕಿನ ಆರನೇ ಹಂತ. ಈ ಹಂತದಲ್ಲಿ ವ್ಯಕ್ತಿಯು ದೈಹಿಕವಾಗಿ ಕುಗ್ಗುತ್ತಾನೆ. ಆತನ ಬಟ್ಟೆಗಳು ಸಡಿಲವಾಗುತ್ತವೆ. ಅದರಲ್ಲೂ ಬೆಲ್ಟ್ ಇಲ್ಲದೆ ಪ್ಯಾಂಟ್ ಧರಿಸಲು ಬರುವುದೇ ಇಲ್ಲ ಎಂಬಷ್ಟು ಪ್ಯಾಂಟು ತುಸು ಹೆಚ್ಚೇ ಸಡಿಲವಾಗುತ್ತದೆ ಎಂಬುದನ್ನು ಅತ್ಯಂತ ಸೂಕ್ತವಾಗಿ ಹೇಳುತ್ತಾನೆ. ಇದರ ಅರ್ಥ ತನ್ನ ಬದುಕಿನ ಆರನೇ ಹಂತದಲ್ಲಿ ಆತ ಮೊದಲಿನ ಮೊನಚನ್ನು ಕಳೆದುಕೊಂಡು ದೈಹಿಕವಾಗಿ ಬಲಹೀನನಾಗುತ್ತಾನೆ. ನಿಧಾನವಾಗಿ ವೃದ್ಧಾಪ್ಯ ಆತನನ್ನು ಆವರಿಸುತ್ತದೆ.

ಈ ಮುಂಚಿನ ವಯೋಸಹಜ ಅಬ್ಬರದ ಧ್ವನಿ ಇದೀಗ ತನ್ನ ಹರಿತವನ್ನು ಕಳೆದುಕೊಳ್ಳುತ್ತದೆ. ಗಾಂಭೀರ್ಯರ ಜೊತೆ ಕೆಲವೊಮ್ಮೆ ಬಾಲಿಶತೆ ಕೂಡ ಆತನದ್ದಾಗುತ್ತದೆ. ಬಹುಶಃ ಈ ಸಮಯದಲ್ಲಿ ಆತ ತನ್ನಲಾಗುತ್ತಿರುವ ಮನೋದೈಹಿಕ ಬದಲಾವಣೆಗಳು ಉಂಟುಮಾಡುವ ಅಸ್ಥಿರತೆಯಿಂದಾಗಿ ಒಳಗಿಂದೊಳಗೆ ಕುಗ್ಗಿ ಹೋಗುತ್ತಾನೆ. ಅದು ಕಾರಣ ಆತನಲ್ಲಿ ಕೀಳರಿಮೆ ಉಂಟಾಗುತ್ತದೆ ಈ ಕೀಳರಿಮೆಯನ್ನು ಮುಚ್ಚಿ ಹಾಕಲು ಬಹುಶಹ ಆತ ಇನ್ನಿಲ್ಲದ ಪ್ರಯತ್ನಗಳನ್ನು ಮಾಡಿ ಅದು ಬಾಲಶರವೆನಿಸಿಕೊಳ್ಳಬಹುದು. ಇನ್ನು ಕೊನೆಯದಾಗಿ ಏಳನೆಯ ಹಂತವನ್ನು ಎರಡನೇ ಬಾಲಿಶತನವೆಂದೇ ಕರೆಯಬಹುದು. ಈ ಹಂತದಲ್ಲಿ ಮನುಷ್ಯ ಮತ್ತೆ ಮಗುವಿನಂತಾಗುತ್ತಾನೆ ಆತನ ದೃಷ್ಟಿ ಇನ್ನಷ್ಟು ಮಂದವಾಗುತ್ತದೆ ನಾಲಿಗೆ ರುಚಿಯನ್ನು ಕಳೆದುಕೊಳ್ಳುತ್ತದೆ ಹಲ್ಲುಗಳು ಒಂದೊಂದಾಗಿ ಉದುರತೊಡಗುತ್ತವೆ. ನಡಿಗೆ ನಿಧಾನವಾಗುತ್ತದೆ ಆತ ತನ್ನ ವಿಸರ್ಜನೆಗಳ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುತ್ತಾನೆ. ಮರೆವು ಆತನನ್ನು ಆವರಿಸಬಹುದು ಸಂಪೂರ್ಣ ಅಸಹಾಯಕ ಪರಿಸ್ಥಿತಿ ಆತನದ್ದಾಗುತ್ತದೆ. ಒಂದೊಮ್ಮೆ ವಿಸರ್ಜನೆಗಳ ಆತ ನಿಯಂತ್ರಣವನ್ನು ಕಳೆದುಕೊಂಡು ಪರಾಧೀನನಾದಾಗ ಆತನ ಬದುಕು ದುಸ್ತರವಾಗುತ್ತದೆ ಜೀವನೇಚ್ಛೆಯು ಕುಂಠಿತವಾಗಿ ಇಹಲೋಕ ತ್ಯಜಿಸಲು ಆಶಿಸುತ್ತಾನೆ.

ಇದನ್ನು ಅತ್ಯಂತ ಮಾರ್ಮಿಕವಾಗಿ ಶೇಕ್ಸ ಪಿಯರ್ ತನ್ನ ಕವನದಲ್ಲಿ ವಿವರಿಸಿದ್ದಾನೆ. ಬದುಕು ಒಂದು ನಾಟಕ ರಂಗ ನಾವೆಲ್ಲ ಇದರ ಪಾತ್ರಧಾರಿಗಳು ಎಂಬ ಮಾತು ಜಗತ್ತಿನ ಎಲ್ಲ ಭಾಷೆಯ ಎಲ್ಲಾ ಲಿಪಿಗಳಲ್ಲೂ ಅಲ್ಲಲ್ಲಿ ಕಂಡು ಬಂದಿದೆ ಆದರೂ ಇದನ್ನು ಮೊದಲು ಬರೆದದ್ದು ಶೇಕ್ಸ್ ಪಿಯರ್ ಎಂಬ ಗಾಢ ಭಾವ ನಮ್ಮನ್ನು ತಟ್ಟುತ್ತದೆ ಏನಂತೀರಾ ಸ್ನೇಹಿತರೇ




ವೀಣಾ ಹೇಮಂತ್
ಗೌಡ ಪಾಟೀಲ್

# ಉಜ್ವಲ ಕುಮಾರ್ ಘೋಷ್ ಅವರಿಂದ ಎರಡನೇ ದಿನವು ಮುಂದುವರಿದ ಭೇಟಿ, ಪರಿಶೀಲನೆ

ರಾಯಚೂರು: ರಾಯಚೂರು ಜಿಲ್ಲೆಯಲ್ಲಿ ಪ್ರವಾಸದಲ್ಲಿರುವ ಭಾರತ ಸರ್ಕಾರದ ವಾಣಿಜ್ಯ ಇಲಾಖೆಯ ಜಂಟಿ ಕಾರ್ಯದರ್ಶಿಗಳು ಹಾಗೂ ಮಹತ್ವಾಕಾಂಕ್ಷಿ ಜಿಲ್ಲೆಯ ರಾಯಚೂರಿನ ಕೇಂದ್ರ ಪ್ರಭಾರ ಅಧಿಕಾರಿಗಳಾದ ಉಜ್ವಲ ಕುಮಾರ್ ಘೋಷ್ ಅವರು ಜೂನ್ 09ರ ಮಂಗಳವಾರದಂದು ರಾಯಚೂರಿನ ವಿವಿಧ ಕಡೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಯರಮರಸ್ ಸರ್ಕ್ಯೂಟ್ ಹೌಸ್‌ನಿಂದ ಬೆಳಿಗ್ಗೆ 08ಗಂಟೆಗೆ ನೇರವಾಗಿ ಮೊದಲಿಗೆ ರಾಯಚೂರು ನಗರದ ಓಪೆಕ್ ಆಸ್ಪತ್ರೆಗೆ ಭೇಟಿ ನೀಡಿ, ಆಸ್ಪತ್ರೆಯಲ್ಲಿನ ಸೌಕರ್ಯಗಳ ಬಗ್ಗೆ ಖುದ್ದು ಪರಿಶೀಲಿಸಿ ಮಾಹಿತಿ ಪಡೆದುಕೊಂಡರು. ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದದಿಂದ ಚಿಕಿತ್ಸೆ ನೀಡಬೇಕು. ಸರ್ಕಾರದ ಸೌಲಭ್ಯಗಳ ಬಗ್ಗೆ ಸಾರ್ವಜನಿಕರಿಗೆ ಸರಿಯಾದ



ಮಾಹಿತಿಯನ್ನು ನೀಡಬೇಕು. ಹಾಗೂ ಚಿಕಿತ್ಸೆಗಳ ಮಾಹಿತಿಯನ್ನು ನಾಮಫಲಕದಲ್ಲಿ ಪ್ರದರ್ಶನ ಮಾಡಬೇಕು. ಅಲ್ಲದೆ ಆಸ್ಪತ್ರೆಗೆ ಒಳಗೆ ಹಾಗೂ ಹೊರಗಡೆ ಸ್ವಚ್ಛತೆಯನ್ನು ಕಾಪಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ಆಸ್ಪತ್ರೆಯ ವಿವಿಧ ವಿಭಾಗದ ವಾರ್ಡ್ಗಳಿಗೆ ಭೇಟಿ ನೀಡಿ, ರೋಗಿಗಳ ಅಹವಾಲು ಆಲಿಸಿದರು. ನಂತರ ಓಪೆಕ್ ಆಸ್ಪತ್ರೆಯಲ್ಲಿ ನೀತಿ ಆಯೋಗದ ವತಿಯಿಂದ ಆರಂಭಿಸಿರುವ ಟ್ರಾಮಾ ಸೆಂಟರ್‌ಗೆ ಭೇಟಿ ನೀಡಿ, ಟ್ರಾಮಾ ಸೆಂಟರ್ ಜಿಲ್ಲೆಯಲ್ಲಿ ಹೇಗೆ ನಡೆಯುತ್ತಿದೆ ಎಂದು ಅಧಿಕಾರಿಗಳನ್ನು ಕೇಳಿದರು. ಜಿಲ್ಲೆಯಲ್ಲಿ ಟ್ರಾಮಾ ಸೆಂಟರ್ ಆರಂಭದಿಂದ ಜಿಲ್ಲೆಗೆ ಅನುಕೂಲವಾಗಿದೆ. ಜಿಲ್ಲೆಯ ಜನರು ಬೇರೆಕಡೆಗೆ ಹೋಗುವುದು ತಪ್ಪಿದೆ. ಜನರಿಗೆ ಉತ್ತಮ ಚಿಕಿತ್ಸೆ ನೀಡಲಾಗುತ್ತದೆ ಎಂದು ಓಪೆಕ್ ಆಸ್ಪತ್ರೆಯ ಅಧಿಕಾರಿಗಳು ಮಹತ್ವಾಕಾಂಕ್ಷಿ ಜಿಲ್ಲೆಯ ರಾಯಚೂರಿನ ಕೇಂದ್ರ ಪ್ರಭಾರ ಅಧಿಕಾರಿಗಳಾದ ಉಜ್ವಲ ಕುಮಾರ್ ಘೋಷ್ ಅವರಿಗೆ ಮಾಹಿತಿ ನೀಡಿದರು. ನಂತರ ಮನ್ಸಲಾಪುರಿನ ಘನತ್ಯಾಜ ನಿರ್ವಹಣೆ ಘಟಕ್ಕೆ ಭೇಟಿ ನೀಡಿ, ಘನತ್ಯಾಜವನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ಸುತ್ತಮುತ್ತಲಿನ ಜನರಿಗೆ ತೊಂದರೆಯಾಗದಂತೆ ನಿರ್ವಹಣೆ ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ನಂತರ ರಾಯಚೂರಿನ ಐತಿಹಾಸಿಕ ಮಾವಿನ ಕೆರೆಯಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಪರಿಶೀಲಿಸಿ, ಕೆರೆ ವೀಕ್ಷಣೆ ಮಾಡಿದರು.

ನಂತರ ಜಿಲ್ಲಾ ಪಂಚಾಯತ ಆವರಣದಲ್ಲಿ ಸ್ವಸಹಾಯ ಗುಂಪಿನ ಮಹಿಳೆಯರಿಂದ ಸ್ಥಾಪಿಸಲಾಗಿರುವ ಅಕ್ಕ ಕೆಫೆಗೆ ಭೇಟಿ ನೀಡಿ, ಕೆಫೆಯಲ್ಲಿ ಕಾಫಿ ಸವಿದರು. ಅಕ್ಕ ಕೆಫೆ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಲಾಗುತ್ತಿದೆ. ಇನ್ನೂ ಮುಂದೆ ಇನ್ನಷ್ಟು ಚೆನ್ನಾಗಿ ನಿರ್ವಹಣೆ ಮಾಡಿಕೊಂಡು ಹೋಗುವಂತೆ ಸ್ವಸಹಾಯ ಗುಂಪಿನ ಮಹಿಳೆಯರಿಗೆ ಸಲಹೆ ನೀಡಿದರು.

ನಂತರ ಯರಮರಸ್ ಸರ್ಕ್ಯೂಟ್ ಹೌಸ್‌ನಲ್ಲಿ ಸರ್ಕಾರಿ ನೌಕರರ ಸಂಘದಿಂದ ಭಾರತ ಸರ್ಕಾರದ ವಾಣಿಜ್ಯ ಇಲಾಖೆಯ ಜಂಟಿ ಕಾರ್ಯದರ್ಶಿಗಳು ಹಾಗೂ ಮಹತ್ವಾಕಾಂಕ್ಷಿ ಜಿಲ್ಲೆಯ ರಾಯಚೂರಿನ ಕೇಂದ್ರ ಪ್ರಭಾರ ಅಧಿಕಾರಿಗಳಾದ ಉಜ್ವಲ ಕುಮಾರ್ ಘೋಷ್ ಅವರು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹೊಪಾತ್ರ, ಜಿಲ್ಲಾ ಪಂಚಾಯತ ಮುಖ್ಯ ಯೋಜನಾ ನಿರ್ದೇಶಕ ಡಾ.ಟಿ.ರೋಣಿ, ಜಿಲ್ಲಾ ಪಂಚಾಯತ ಯೋಜನಾಧಿಕಾರಿ ಶರಣಬಸವರಾಜ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ, ರಿಮ್ಸ್ ಆಸ್ಪತ್ರೆಯ ನಿರ್ದೇಶಕ ಡಾ.ರಮೇಶ ಬಿ.ಕೆ., ಓಪೆಕ್ ಆಸ್ಪತ್ರೆಯ ವಿಶೇಷಾಧಿಕಾರಿ ಡಾ.ರಮೇಶ ಸಾಗರ್ ಸೇರಿದಂತೆ ಇತರರು ಇದ್ದರು.

